ಸಂಪುಟ: 04 ಸಂಚಿಕೆ: 88 ಪುಟಗಳು: 08 ಮಂಗಳವಾರ 11 ಜೂನ್ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

ಮುಂಜಾನೆ ಮಾತು

ಹಾರ್ಡ್ ವರ್ಕ್ ಎಂಬ ಚಕ್ರ ಮತ್ತು ಆತ್ಮವಿಶ್ವಾಸ ಎಂಬ ಇಂಧನದ ಮೇಲೆ ಸಕ್ಸಸ್ ಎಂಬ ವಾಹನ ಚಲಿಸುತ್ತದೆ

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಪಿಎಂಎವೈ ಅಡಿಯಲ್ಲಿ 3 ಕೋಟಿ ಮನೆ ನಿರ್ಮಾಣ: ಪ್ರಧಾನಿ ಮೋದಿ

• ಉದಯವಾಹಿನಿ, ನವದೆಹಲಿ

ಸತತ ಮೂರನೇ ಬಾರಿಗೆ ಪ್ರಧಾನಿಯಾಗಿ ಮೋದಿ ಪ್ರಮಾಣ ವಚನ ಸ್ವೀಕರಿಸಿದ ಒಂದು ದಿನಗಳ ಬೆನ್ನಲ್ಲೇ ಪಿಎಂಎವೈ ಅಡಿಯಲ್ಲಿ 3 ಕೋಟಿ ಮನೆಗಳನ್ನು ನಿರ್ಮಾಣ ಮಾಡಿವಂತ ನಿರ್ಧಾರವನ್ನು ಇಂದಿನ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ಮಹತ್ವದ ಕೇಂದ್ರ ಸಚಿವ ಸಂಪುಟ ಸಭೆ ನಡೆಯಿತು. ಸೋಮವಾರ ನಡೆದ ಮೊದಲ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ, ಅರ್ಹ ಕುಟುಂಬಗಳ ಸಂಖ್ಯೆಯಲ್ಲಿನ ಹೆಚ್ಚಳದಿಂದ ಉಂಟಾಗುವ ವಸತಿ ಅಗತ್ಯಗಳನ್ನು ಪೂರೈಸಲು ಮನೆಗಳನ್ನು ನಿರ್ಮಿಸಲು 3 ಕೋಟಿ ಹೆಚ್ಚುವರಿ ಗ್ರಾಮೀಣ ಮತ್ತು ನಗರ ಕುಟುಂಬಗಳಿಗೆ ಸರ್ಕಾರ ನೆರವು ನೀಡಲಿದೆ ಎಂದು ಕೇಂದ್ರ ಸರ್ಕಾರ ಘೋಷಿಸಿತು. ಅರ್ಹ ಗ್ರಾಮೀಣ ಮತ್ತು ನಗರ ಕುಟುಂಬಗಳಿಗೆ ಮೂಲಭೂತ ಸೌಕರ್ಯಗಳೊಂದಿಗೆ ಮನೆಗಳನ್ನು ನಿರ್ಮಿಸಲು ನೆರವು ನೀಡಲು ಭಾರತ ಸರ್ಕಾರ 201516 ರಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ಜಾರಿಗೆ ತರುತ್ತಿದೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

ಪಿಎಂಎವೈ ಅಡಿಯಲ್ಲಿ, ಕಳೆದ 10 ವರ್ಷಗಳಲ್ಲಿ ವಸತಿ ಯೋಜನೆಗಳ ಅಡಿಯಲ್ಲಿ ಅರ್ಹ ಬಡ ಕುಟುಂಬಗಳಿಗೆ ಒಟ್ಟು 4.21 ಕೋಟಿ ಮನೆಗಳನ್ನು ಪೂರ್ಣಗೊಳಿಸಲಾಗಿದೆ.

ಬಿಜೆಪಿ ಶಾಸಕ ಅರವಿಂದ್ ಬೆಲ್ಲದ್ ಸೇರಿ ಮೂವರ ವಿರುದ್ಧ ಕೇಸ್

• ಉದಯವಾಹಿನಿ, ಹುಬ್ಬಳ್ಳಿ

ಬೆದರಿಕೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಿಜೆಪಿ ವಿಧಾನ ಪರಿಷತ್ ಉಪನಾಯಕ ಅರವಿಂದ್ ಬೆಲ್ಲದ್ ಅವರು ಸೇರಿದಂತೆ ಮೂವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೌದು, ಬಿಜೆಪಿ ಶಾಸಕರು ಸೇರಿದಂತೆ ಮೂವರ ವಿರುದ್ಧ ಹುಬ್ಬಳ್ಳಿಯ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ. ಮೂಲಗಳ ಪ್ರಕಾರ ಜೀವ ಬೆದರಿಕೆ ಆರೋಪದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿದು ಬಂದಿದೆ. ಶಾಸಕ ಅರವಿಂದ್ ಬೆಲ್ಲದ್, ಉಪ ಮೇಯರ್ ಸತೀಶ ಹಾನಗಲ್ ಮತ್ತು ಲಕ್ಷ್ಮಣ ಭೋವಿ ವಿರುದ್ಧ ಪ್ರಕರಣ ದಾಖಲು . ಇವರು ಕೊಳಚೆ ನಿರ್ಮೂಲನ ಮಂಡಳಿ ನೀಡಿದ ಹಕ್ಕು ಪತ್ರ ವಿತರಣೆ ಕುರಿತು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಅವರು ಜೀವ ಬೆದರಿಕೆ ಹಾಕಿದ್ದರು ಎಂಬ ಆರೋಪ ಕೇಳಿ ಬಂದಿದೆ.

ಮಾಜಿ ಸಿಎಂ ಬೊಮ್ಮಾಯಿಗೆ ಕೈತಪ್ಪಿದ ಕೇಂದ್ರ ಸಚಿವ ಸ್ಥಾನ..!

• ಉದಯವಾಹಿನಿ, ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ 293 ಸ್ಥಾನ ಗೆದ್ದು ಅಧಿಕಾರದ ಭಾಗ್ಯ ಪಡೆದಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಭಾನುವಾರ ಅಸ್ತಿತ್ವಕ್ಕೆ ಬಂದಿದೆ. ಅಧಿಕಾರ ಹಿಡಿದಿರುವ ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ರಾಜ್ಯದ ಐವರು ಸಂಸದರಿಗೆ ಮಂತ್ರಿ ಭಾಗ್ಯ ದೊರಕಿದೆ. ಲಿಂಗಾಯತರ ಕೋಟಾದಡಿ ಬೊಮ್ಮಾಯಿ ಕೇಂದ್ರ ಸಚಿವರಾಗುವುದು ಖಚಿತವೆಂದು ಹೇಳಲಾಗಿತ್ತು.

ತಮ್ಮ ಅನುಭವ ಬಳಸಿಕೊಳ್ಳುವ ದೃಷ್ಟಿಯಿಂದ ಈ ಸೂಚನೆ ನೀಡುತ್ತಿರುವುದಾಗಿಯೂ ಹೈಕಮಾಂಡ್ ಪ್ರತಿನಿಧಿಗಳು ಆಗ ಹೇಳಿದ್ದರು. ಕಳೆದ 2 3 ದಿನಗಳಿಂದಲೂ ಬೊಮ್ಮಾಯಿ ಅವರ ಹೆಸರು ಓಡಾಡುತ್ತಿತ್ತು. ಇದರ ಹೊರತಾಗಿಯೂ ಅವರನ್ನು ಪರಿಗಣಿಸದೆ ಇರುವುದಕ್ಕೆ ಕಾರಣ ಬಹಳ ಇಂಟರೆಸ್ಟಿಂಗ್ ಆಗಿದೆ.

ಬೊಮ್ಮಾಯಿ ಅವರಿಗೆ ಸ್ಥಾನ ನೀಡಿದ್ದರೆ ಅವರಿಗೆ ಕ್ಯಾಬಿನೆಟ್ ದರ್ಜೆ ನೀಡಬೇಕಾಗುತ್ತಿತ್ತು. ಈ ಬಾರಿ ಮಿತ್ರಪಕ್ಷಗಳನ್ನು ಸಂಭಾಳಿಸಬೇಕಿರುವುದರಿಂದ ಬಿಜೆಪಿ ತನ್ನ ಬಳಿಯೇ ಹೆಚ್ಚು ಕ್ಯಾಬಿನೆಟ್ ಸ್ಥಾನ ಇಟ್ಟುಕೊಳ್ಳುವಂತಿಲ್ಲ. ಹಾಗಾಗಿ ಲಿಂಗಾಯತ ಕೋಟಾದಿಂದ ಬೊಮ್ಮಾಯಿ ಬದಲಿಗೆ ವಿ.ಸೋಮಣ್ಣ ಅವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸೋಮಣ್ಣ ಅವರಿಗೆ ರಾಜ್ಯ ದರ್ಜೆಯ ಸ್ಥಾನ ನೀಡಲಾಗುತ್ತಿದೆ.

ಬದ್ಧತೆ ಪ್ರದರ್ಶಿಸಿದ ಪ್ರಧಾನಿ ಮೋದಿಗೆ ಹೆಚ್‌ಡಿಕೆ ಧನ್ಯವಾದ

• ಉದಯವಾಹಿನಿ, ಬೆಂಗಳೂರು

ಮೊದಲ ನಿರ್ಧಾರದಲ್ಲಿ ರೈತರ ಬಗ್ಗೆ ನರೇಂದ್ರ ಮೋದಿಯವರು ಮೂರನೇ ಅವಧಿಗೆ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುದಿನವೇ ಅನ್ನದಾತರ ಪರವಾಗಿ ಮಹತ್ವದ ನಿರ್ಧಾರ ಕೈಗೊಳ್ಳುವುದಕ್ಕೆ ಸಮಸ್ತ ರೈತಬಂಧುಗಳ ಪರವಾಗಿ ಧನ್ಯವಾದಗಳನ್ನು ಕೇಂದ್ರದ ನೂತನ ಸಚಿವ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿದ್ದಾರೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಧಾನಮಂತ್ರಿಗಳ ಕಿಸಾನ್ ನಿಧಿಯಿಂದ 9.3 ಕೋಟಿ ರೈತರುಗಳಿಗೆ 20 ಸಾವಿರ ಕೋಟಿ ರೂ.ಗಳ ಬಿಡುಗಡೆಗೆ ತೀರ್ಮಾನ ಕೈಗೊಂಡಿದ್ದಾರೆ. ಇದು ಎನ್‌ಡಿಎ ಸರ್ಕಾರಕ್ಕೆ ನಮ್ಮ ರೈತರ ಬಗ್ಗೆ ಇರುವ ಬದ್ಧತೆಯನ್ನು ತೋರುತ್ತದೆ ಎಂದು ಹೇಳಿದ್ದಾರೆ.

ನಿ.ಸೀತಾರಾಮನ್ ಹಣಕಾಸು ಸಚಿವಾಲಯ

ಕುಮಾರಸ್ವಾಮಿ ಬೃಹತ್ ಕೈಗಾರಿಕೆ/ ಉಕ್ಕು

ಪ್ರಹ್ಲಾದ್ ಜೋಶಿ - ಗ್ರಾಹಕರ ವ್ಯವಹಾರ ಆಹಾರ ಮತ್ತು ನಾಗರೀಕ ಸರಬರಾಜು

ವಿ.ಸೋಮಣ್ಣ - ಜಲಶಕ್ತಿ / ರೈಲ್ವೆ

ಶೋಭಾ ಕರಂದ್ಲಾಜೆ - ಸಣ್ಣ , ಮಧ್ಯಮ ಕೈಗಾರಿಕೆ/ ಕಾರ್ಮಿಕ

ಮಿತ್ರರಿಗೆ ಖಾತೆಯ ಮಿಠಾಯಿ

ಬಲಿಷ್ಠ ಖಾತೆಗಳನ್ನು ತನ್ನಲ್ಲೇ ಉಳಿಸಿಕೊಂಡ ಬಿಜೆಪಿ

ನೂತನ ಸಚಿವರಿಗೆ ಖಾತೆ ಹಂಚಿಕೆ



• ಉದಯವಾಹಿನಿ, ಹೊಸದಿಲ್ಲಿ

ಗೃಹ, ಹಣಕಾಸು, ವಿದೇಶಾಂಗ, ರಕ್ಷಣಾ, ರೈಲ್ವೇ, ಕೃಷಿ, ಶಿಕ್ಷಣ, ರಸ್ತೆ, ಸೇರಿದಂತೆ ಪ್ರಮುಖ ಖಾತೆಗಳನ್ನು ಬಿಜೆಪಿ ತನ್ನಲ್ಲೇ ಉಳಿಸಿಕೊಂಡಿದೆ. ಮೋದಿ ಎರಡನೇ ಅವಧಿಯಲ್ಲಿ ಸಚಿವರಾಗಿದ್ದ ಅಮಿತ್ ಷಾ, ರಾಜ್ ನಾಥ್ ಸಿಂಗ್, ನಿರ್ಮಲ ಸೀತರಾಮನ್, ಎನ್.ಜೈ ಶಂಕರ್, ನಿತಿನ್ ಗಡ್ಕರಿ, ಪಿಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್ ಅವರುಗಳು ಪುನಃ ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಕೃಷಿ ನೀಡಲಾಗುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ. ಬದಲಿಗೆ ಅತ್ಯಂತ ಮಹತ್ವದ ಬೃಹತ್ ಕೈಗಾರಿಕಾ ಹಾಗೂ ಉಕ್ಕು ಹೊಣೆಗಾರಿಕೆ ನೀಡಲಾಗಿದೆ. ಹಿಂದಿನ ಸರ್ಕಾರದಲ್ಲಿ ಸಂಸದೀಯ ವ್ಯವಹಾರಗಳು,ಗಣಿಗಾರಿಕೆ ಸಚಿವರಾಗಿದ್ದ ಪ್ರಹ್ಲಾದ್ ಜೋಶಿ ಅವರಿಗೆ ಮುಂಬಡ್ತೀ ಎನ್ನುವಂತೆ ಮಹತ್ವದ ಆಹಾರ ಮತ್ತು ಗ್ರಾಹಕ ವ್ಯವಹಾರ, ನವೀಕರಿಸಬಹುದಾದ ಇಂಧನ ಖಾತೆ ನೀಡಲಾಗಿದೆ. ಅಚ್ಚರಿಯ ಬೆಳವಣಿಗೆಯಲ್ಲಿ ಮೊದಲ ಬಾರಿಗೆ ಕೇಂದ್ರದಲ್ಲಿ ರಾಜ್ಯ ಸಚಿವರಾಗಿ ಸೇರ್ಪಡೆಯಾಗಿದ್ದ ವಿ.ಸೋಮಣ್ಣ ಅವರಿಗೆ ರಾಜ್ಯ ರೈಲ್ವೇ,ಜಲಶಕ್ತೀ ಖಾತೆ ನೀಡಿರುವುದು ಹಲವರ ಹುಬ್ಬೇರುವಂತೆ ಮಾಡಿದೆ. ಈ ಹಿಂದೆ 2019 ರ ಮೋದಿ ಸಂಪುಟದಲ್ಲಿ ಬೆಳಗಾವಿಯ ಸಂಸದರಾಗಿದ್ದ ಸುರೇಶ್ ಅಂಗಡಿ ಕೂಡ ರಾಜ್ಯ ರೈಲ್ವೇ ಖಾತೆಯ ಸಚಿವರಾಗಿದ್ದರು. ಕಳೆದ ಬಾರಿ ರಾಜ್ಯ ಕೃಷಿ ಖಾತೆಯ ಸಚಿವರಾಗಿದ್ದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸದಸ್ಯೆ ಶೋಭಾ ಕರಂದ್ಲಾಜೆ ಅವರಿಗೆ ಈ ಬಾರಿ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ, ಕಾರ್ಮಿಕ ಇಲಾಖೆಯ ಹೊಣೆಗಾರಿಕೆ ನೀಡಲಾಗಿದೆ.

ಶುಭ ಕೋರಿದ ಪಾಕ್ ಪ್ರಧಾನಿ

ಮೂರನೇ ಅವಧಿಗೆ ಭಾರತದ ಪ್ರಧಾನಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದ ಮೋದಿ ಅವರಿಗೆ ಕೊನೆಗೂ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಸೋಮವಾರ ಶುಭಾಶಯ ಕೋರಿದ್ದಾರೆ. ತಮ್ಮನ್ನು ಅಭಿನಂದಿಸಿದ ಪಾಕ್ ಪ್ರಧಾನಿಗೆ ಮೋದಿ ಧನ್ಯವಾದ ಅರ್ಪಿಸಿದ್ದಾರೆ.ಜೂನ್ 4ರಂದು ಲೋಕಸಭೆ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ನಂತರ ಸುಮಾರು 100 ದೇಶಗಳ ನಾಯಕರು ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಗೆಲುವಿಗೆ ಮೋದಿಯವರನ್ನು ಅಭಿನಂದಿಸಿದ್ದಾರೆ. ನಿಮ್ಮ ಶುಭ ಹಾರೈಕೆಗಳಿಗಾಗಿ ಶೆಹಬಾಜ್ ಷರೀಫ್ ಅವರಿಗೆ ಧನ್ಯವಾದಗಳು ಎಂದು ಎಕ್ಸ್‌ನಲ್ಲಿ ಷರೀಫ್ ಅವರ ಸಂದೇಶಕ್ಕೆ ಪ್ರತ್ಯುತ್ತರವಾಗಿ ಮೋದಿ ಪೋಸ್ಟ್ ಹಾಕಿದ್ದಾರೆ. ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಪೋಸ್ಟ್ ಮಾಡಿದ ಷರೀಫ್,ಭಾರತದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮೋದಿ ಅವರಿಗೆ ಅಭಿನಂದನೆಗಳು ಎಂದು ಹೇಳಿದ್ದಾರೆ.

ಪ್ರಮುಖ ಖಾತೆಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ

2.0 ಸರ್ಕಾರದಲ್ಲಿ ಪ್ರಮುಖ ಖಾತೆ ನಿರ್ವಹಿಸಿದ ಸಚಿವರಿಗೆ ಅದೇ ಖಾತೆ ಹಂಚಿಕೆ ಮಾಡಲಾಗಿದೆ. ಪ್ರಮುಖ ಖಾತೆಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸಾರಿಗೆ ಹೆದ್ದಾರಿ ರಾಜ್ಯ ಖಾತೆಯನ್ನು ಇಬ್ಬರಿಗೆ ಹಂಚಲಾಗಿದೆ. ಹರ್ಷ ಮಲ್ಹೋತ್ರ, ಅಜಯ್ ತಮ್ಟಾ ಇಬ್ಬರಿಗೆ ಕೊಡಲಾಗಿದೆ. ಅಮಿತ್ ಶಾ ಈ ಹಿಂದೆ ಕೇಂದ್ರ ಸರ್ಕಾರದಲ್ಲಿ ಗೃಹ ಖಾತೆಯನ್ನು ನಿಭಾಯಿಸಿದ್ದರು. ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ 370 ಸೆಕ್ಷನ್ ರದ್ದತಿ, ತ್ರಿವಳಿ ತಲಾಖ್ ರದ್ದತಿ ಸೇರಿದಂತೆ ಹಲವು ಕಾನೂನು ಜಾರಿಯಲ್ಲಿ ಅಮಿತ್ ಶಾ ಪಾತ್ರ ಪ್ರಮುಖವಾಗಿತ್ತು. ಇದೀಗ ಮೋದಿ 3.0 ಅವಧಿಯಲ್ಲೂ ಅಮಿತ್ ಶಾಗೆ ಪ್ರಬಲವಾದ ಗೃಹ ಖಾತೆಯನ್ನೇ ನೀಡಲಾಗಿದೆ.

ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ

ಪ್ರಧಾನಿ ಮೋದಿ ಅವರು ಪಿಎಂಕಿಸಾನ್ ಸಮ್ಮಾನ್ ನಿಧಿಯಿ ಹಣ ಬಿಡುಗಡೆ ಮಾಡುವ ಮೂಲಕ ರೈತರಿಗೆ ಯಾವುದೇ ವಿಶೇಷ ಉಪಕಾರವನ್ನು ಮಾಡಲಿಲ್ಲ, ಒಂದು ತಿಂಗಳ ಹಿಂದೆಯೇ ಹಣ ಬಿಡುಗಡೆ ಮಾಡಬೇಕಾಗಿತ್ತು, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಅದು ಸಾಧ್ಯವಾಗಿರಲಿಲ್ಲ, ಹಣವನ್ನು ಈಗ ಬಿಡುಗಡೆ ಮಾಡಲಾಗಿದೆ ಎಂದು ಕಾಂಗ್ರೇಸ್ ಟೀಕಿಸಿದೆ. ಮೋದಿ ಅವರು ತಮ್ಮ ಹೊಸ ಸರ್ಕಾರದ ಮೊದಲ ನಿರ್ಧಾರ ಎಂದು ಹೇಳುತ್ತಿರುವ 17 ನೇ ಕಂತಿನ ಹಣವನ್ನು ಬಿಡುಗಡೆ ಮಾಡುವುದು ತಮ್ಮ ಸರ್ಕಾರದ ನೀತಿಯ ಪ್ರಕಾರ ರೈತರಿಗೆ ನೀಡಬೇಕಾದ ನ್ಯಾಯಸಮ್ಮತ ಹಕ್ಕು ಎಂದು ಕಾಂಗ್ರೇಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. ರೈತರ ಬಗ್ಗೆ ಅವರಿಗೆ ನಿಜವಾದ ಕಾಳಜಿ ಇದ್ದರೆ, ಪ್ರಧಾನ ಮಂತ್ರಿಗಳು ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಸ್ಥಾನಮಾನವನ್ನು ನೀಡಬೇಕು, ಕೃಷಿ ಸಾಲ ಮನ್ನಾವನ್ನು ಘೋಷಿಸಬೇಕು ಮತ್ತು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವಿಮಾ ಪಾವತಿಯನ್ನು ಖಾತರಿಪಡಿಸಬೇಕು ಎಂದರು. ತಮ್ಮ ಮೂರನೇ ಅವಧಿಯಲ್ಲಿ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೋದಿ ಸೋಮವಾರ ತಮ್ಮ ಮೊದಲ ಕಡತಕ್ಕೆ ಸಹಿ ಹಾಕಿದ್ದಾರೆ.

ಯಾರಿಗೆ ಯಾವ ಖಾತೆ?

ರಾಜನಾಥ್ ಸಿಂಗ್	ರಕ್ಷಣಾ ಸಚಿವಾಲಯ
ಜೆಡಿ ನಡ್ಡಾ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ/ ರಾಸಾಯನಿಕ ಗೊಬ್ಬರ
ಅಮಿತ್ ಶಾ	ಗೃಹ ಸಚಿವಾಲಯ / ಸಹಕಾರ ಸಚಿವಾಲಯ
ನಿತಿನ್ ಗಡ್ಕರಿ	ರಸ್ತೆ ಸಾರಿಗೆ ಮತ್ತು ಹೆದ್ದಾರಿ
ಎಸ್.ಎಸ್. ಚೌಹಾಣ್	ಕೃಷಿ ಮತ್ತು ರೈತರ ಕಲ್ಯಾಣ/ ಗ್ರಾಮೀಣಾಭಿವೃದ್ಧಿ.
ನಿ.ಸೀತಾರಾಮನ್	ಹಣಕಾಸು ಸಚಿವಾಲಯ
ಎಸ್.ಜೈಶಂಕರ್	ವಿದೇಶಾಂಗ ಸಚಿವಾಲಯ
ಎಚ್‌ಡಿ.ಕುಮಾರಸ್ವಾಮಿ	ಬೃಹತ್ ಕೈಗಾರಿಕೆ/ ಉಕ್ಕು
ಗಜೇಂದ್ರ ಸಿಂಗ್ ಶೇಖಾವತ್	ಪ್ರವಾಸೋದ್ಯಮ/ ಸಂಸ್ಕೃತಿ
ಅಶ್ವಿನಿ ವೈಷ್ಣವ್	ಮಾಹಿತಿ ಮತ್ತು ಪ್ರಸಾರ/ ರೈಲ್ವೆ
ರಾಮಮೋಹನ ನಾಯ್ಡು	ನಾಗರೀಕ ವಿಮಾನಯಾನ
ಧರ್ಮೇಂದ್ರ ಪ್ರದಾನ	ಶಿಕ್ಷಣ, ಮಾನವ ಸಂಪನ್ಮೂಲ ಅಭಿವೃದ್ಧಿ
ಅನ್ನಪೂರ್ಣಾ ದೇವಿ	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಭೂಪೇಂದ್ರ ಯಾದವ್	ಪರಿಸರ ಅರಣ್ಯ ಹವಾಮಾನ ಬದಲಾವಣೆ
ಸಿಆರ್‌ಪಾಟೀಲ್	ಜಲಶಕ್ತಿ
ಕಿರಣ್ ರಿಜಿಜು	ಸಂಸದೀಯ ವ್ಯವಹಾರ
ರವನೀತ್ ಸಿಂಗ್ ಬಿಟ್ಟು	ಅಲ್ಪಸಂಖ್ಯಾತ ವ್ಯವಹಾರ
ಜ್ಯೋತಿರಾಧಿತ್ಯ ಸಿಂಧ್ಯಾ	ಟೆಲಿಕಾಂ
ಗಿರಿರಾಜ್ ಸಿಂಗ್	ಜವಳಿ
ಪ್ರಹ್ಲಾದ್ ಜೋಶಿ	ಗ್ರಾಹಕರ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು
ಹರ್ದೀಪ್ ಸಿಂಗ್ ಪುರಿ	ಪೆಟ್ರೋಲಿಯಂ.
ಪಿಯುಷ್ ಗೋಯಲ್	ವಾಣಿಜ್ಯ ಮತ್ತು ಕೈಗಾರಿಕೆ.
ಜಿತನ್‌ರಾಮ್ ಮಾಂಝಿ	ಸಣ್ಣ ಮತ್ತು ಮಧ್ಯಮ ಕೈಗಾರಿಕೆ.
ರಾಜೀವ್ ರಂಜನ್‌ಸಿಂಗ್	ಪಂಚಾಯತ್ ರಾಜ್, ಮೀನುಗಾರಿಕೆ, ಪಶುಸಂಗೋಪನೆ.
ಸರ್ಬಾನಂದ ಸೋನಾವಾಲ್	ಬಂದರು, ಜಲಸಾರಿಗೆ.
ಡಾ.ವೀರೇಂದ್ರ ಕುಮಾರ್	ಸಾಮಾಜಿಕ ನ್ಯಾಯ ಸಬಲೀಕರಣ.
ರಾಮ್ ಮೋಹನ್ ನಾಯ್ಡು	ನಾಗರೀಕ ವಿಮಾನಯಾನ
ಜೋಯಲ್ ಓರಾಂ	ಬುಡಕಟ್ಟು ಅಭಿವೃದ್ಧಿ.
ಡಾಎಂ.ಮಂಡಾವಿಯ	ಕಾರ್ಮಿಕ ಕಲ್ಯಾಣ/ ಯುವಜನ ಮತ್ತು ಕ್ರೀಡೆ.
ಜಿ.ಕಿಶನ್ ರೆಡ್ಡಿ	ಕಲ್ಲಿದ್ದಲು/ ಗಣಿ
ಚಿರಾಗ್ ಪಾಸ್ವಾನ್	ಆಹಾರ ಸಂಸ್ಕರಣಾ ಕೈಗಾರಿಕೆ

ರಾಜ್ಯ ಸಚಿವರು ಸ್ವತಂತ್ರ ನಿರ್ವಹಣೆ

ರಾವ್ ಇಂದ್ರಜಿತ್‌ಸಿಂಗ್	ವಿಜ್ಞಾನ ತಂತ್ರಜ್ಞಾನ.
ಜಿತೇಂದ್ರ ಸಿಂಗ್	ಭೂ ವಿಜ್ಞಾನ
ಎ.ರಾಮ್‌ಮೇಘವಾಲ್	ಕಾನೂನು ಮತ್ತು ನ್ಯಾಯ/ ಸಂಸದೀಯ ವ್ಯವಹಾರ
ಪ್ರತಾಪ್‌ರಾವ್ ಜಾಧವ್	ಆಯುಷ್ ಇಲಾಖೆ (ಆರೋಗ್ಯ ರಾಜ್ಯ ಖಾತೆ)
ಜಯಂತ್ ಚೌಧರಿ	ಕೌಶಲ್ಯಾಭಿವೃದ್ಧಿ/ ಶಿಕ್ಷಣ (ರಾಜ್ಯ ಖಾತೆ)

ವಿವಿಧ ಖಾತೆಗಳ ರಾಜ್ಯ ಸಚಿವರು

ಜಿತಿನ್ ಪ್ರಸಾದ್	ವಾಣಿಜ್ಯ ಮತ್ತು ಕೈಗಾರಿಕೆ / ಮಾಹಿತಿ ತಂತ್ರಜ್ಞಾನ
ಶ್ರೀಪಾದ್ ನಾಯ್ಕ್	ವಿದ್ಯುತ್ ಹೊಸ ಮತ್ತು ನವೀಕರಿಸಬಹುದಾದ ಇಂಧನ
ಪಂಕಜ್ ಚೌಧರಿ	ಹಣಕಾಸು
ಕೃಷನ್‌ಪಾಲ್ ಗುರ್ಜಾರ್	ಸಹಕಾರ
ರಾಮ್‌ದಾಸ್ ಅಠಾವಳೆ	ನ್ಯಾಯ ಸಬಲೀಕರಣ
ರಾಮನಾಥ್ ಠಾಕೂರ್	ಕೃಷಿ/ ರೈತರ ಸಬಲೀಕರಣ
ನಿತ್ಯಾನಂದ ರಾಯ್	ಗೃಹ ಸಚಿವಾಲಯ
ಅನುಪ್ರಿಯಾ ಪಟೇಲ್	ಆರೋಗ್ಯ/ ರಾಸಾಯನಿಕ, ಗೊಬ್ಬರ
ವಿ.ಸೋಮಣ್ಣ	ಜಲಶಕ್ತಿ/ ರೈಲ್ವೆ
ಚಂದ್ರಶೇಖರ್ ಪೆಮ್ಮಸಾನಿ	ಗ್ರಾಮೀಣ ಅಭಿವೃದ್ಧಿ/ ಸಂವಹನ
ಎಸ್.ಪಿ.ಸಿಂಗ್ ಬಘೇಲ್	ಪಶುಸಂಗೋಪನೆ/ ಮೀನುಗಾರಿಕೆ/ ಪಂಚಾಯತ್ ರಾಜ್
ಶೋಭಾ ಕರಂದ್ಲಾಜೆ	ಸಣ್ಣ, ಮಧ್ಯಮ ಕೈಗಾರಿಕೆ/ ಕಾರ್ಮಿಕ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ವರತನುಜನೆ ವಾಕ್ಕದು ನಾಲ್ಕಕ್ಕು

ನಿಜಗುಣರ ಪರಮಾರ್ಥ ಗೀತೆಯ ಮಾತು. ವಶಿಷ್ಠರು ರಾಮನಿಗೆ ಹೇಳಿದ್ದು. ಮಾನವನು ತನ್ನ ಅಭಿಪ್ರಾಯವನ್ನು ಪರರಿಗೆ ತಿಳಿಸುವ ಮಾಧ್ಯಮ ಭಾಷೆ ಮಾತು ವಾಕ್. ಅದು ಪರಾ ಪಶ್ಯಂತೀ ಮಧ್ಯಮಾ ವೈಖರೀ ಎಂದು ನಾಲ್ಕು ವಿಧ. ಒಳಗೆಳೆದುಕೊಂಡ ಉಸಿರು ಮೂಲಾಧಾರ ಪರ್ಯಂತ ನುಸುಳಿ ಮತ್ತೆ ಅದು ಮೇಲ್ಮುಖವಾಗಿ ಸಂಚರಿಸಿ ಹೊರಹೋಗುವುದು. ಊರ್ಧ್ವಮುಖದ ವಾಯುವಿನಿಂದ ಅಕ್ಷರದ ಉತ್ಪತ್ತಿ. ಗುದ ಗುಹ್ಯಗಳ ಮಧ್ಯಭಾಗ ಮೂಲಾಧಾರ. ಈ ಸ್ಥಾನದಲ್ಲಿ ವಾಯುವಿನ ಘನ ಸ್ಪರ್ಶದಿಂದ ಉಂಟಾಗುವ ವಾಣೀ ಪರಾ. ಇದು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಯಾರಿಗೂ ಗೋಚರವಾಗದು. ಅನುಮಾನ ಊಹೆಯಿಂದ ಸಿದ್ಧ. ಹತ್ತಿರದಿಂದ ಬಿದ್ದದ್ದು ಶಬ್ದ ಮಾಡದು. ಎತ್ತರದಿಂದ ಬಿದ್ದದ್ದು ಹೆಚ್ಚು ಶಬ್ದ ಮಾಡುವುದು. ಮೂಲಾಧಾರದಿಂದ ಮೇಲೆದ್ದು ನಾಭಿಸ್ಥಾನದಲ್ಲಿ ಅಪ್ಪಳಿಸಿದಾಗ ಉಂಟಾಗುವ ಶಬ್ದ ಪಶ್ಯಂತೀ. ಇದು ಸೂಕ್ಷ್ಮಮನದ ಯೋಗಿಗಳಿಗೆ ವೇದ್ಯ. ಅಲ್ಲಿಂದ ವಾಯು ಮೇಲ್ಮುಖವಾಗಿ ಹರಿದು ಹೃದಯಸ್ಥಾನದಲ್ಲಿ ಅಪ್ಪಳಿಸಿದಾಗ ಅಲ್ಲಿ ಉಂಟಾಗುವ ವಾಕ್ ಮಧ್ಯಮಾ. ಬಾಯಿ ಬಿಟ್ಟು ಹೇಳದ ಮನಸ್ಸಿನಲ್ಲಿಯೇ ಹೇಳಿಕೊಳ್ಳುವ ತುಟಿ ಮಿಟುಕಿಸಿ ಮೆಲು ಧ್ವನಿಯಲ್ಲಿ ಹೇಳುವ ಜಪ ತಪ ಧ್ಯಾನಗಳಲ್ಲಿ ಬಳಸುವ ವಾಕ್ ಇದಾಗಿದ್ದು ಅವರವರಿಗೆ ಸುವೇದ್ಯ. ಇನ್ನು ಹೃದಯದಿಂದ ಮೇಲಕ್ಕೆ ನುಗ್ಗಿ ಕಂಠ ದಂತ ನಾಲಿಗೆ ತುಟಿ ಕಿರುನಾಲಿಗೆ ಅಂಗಳಪ್ರದೇಶ ಮೂಗು ಕಂಠತಾಲು ಕಂಠೋಷ್ಠ ಸ್ಥಾನಗಳಲ್ಲಿ ಹುಟ್ಟುವ ಪರರಿಗೆ ಕೇಳಿಸುವ ನಾವೆಲ್ಲ ಆಡುವ ವಾಕ್ ವೈಖರೀ.

ಕರ್ನಾಟಕ ವಿಧಾನಸಭೆಯಲ್ಲಿ ಪ್ರತಿಪಕ್ಷಕ್ಕೆ ಸಮರ್ಥರ ಕೊರತೆ

ರಾಷ್ಟ್ರ ರಾಜಕಾರಣಕ್ಕೆ ಘಟಾನುಘಟಿ ವಿಪಕ್ಷ ನಾಯಕರು, ವಿಧಾನಪರಿಷತ್ ಎರಡರಲ್ಲೂ ಅನುಭವಿಗಳ ಕೊರತೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ವಿಧಾನಮಂಡಲದ ಘಟಾನುಘಟಿ ಸದಸ್ಯರು ಲೋಕಸಭೆಗೆ ಆಯ್ಕೆಯಾಗಿರುವುದರಿಂದ ಎರಡೂ ಸದನಗಳಲ್ಲಿ ಅನುಭವಿಗಳಿಲ್ಲದೆ ಪ್ರತಿಪಕ್ಷಗಳು ಸೊರಗುವ ಲಕ್ಷಣಗಳು ಕಾಣಿಸುತ್ತಿವೆ. ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಎಚ್.ಡಿ.ಕುಮಾರಸ್ವಾಮಿ ಹಾಗೂ ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಅವರು ಲೋಕಸಭೆಗೆ ಆಯ್ಕೆಯಾಗಿದ್ದು ವಿಧಾನಸಭೆ ಮತ್ತು ವಿಧಾನಪರಿಷತ್ ಎರಡರಲ್ಲೂ ಅನುಭವಿಗಳ ಕೊರತೆ ಕಾಣಿಸಿಕೊಂಡಿದೆ.

ಕಟ್ಟಿ ಹಾಕಲು ಅಧಿಕಾರ ನಡೆಸಿ

ಕೋಟಾ ಶ್ರೀನಿವಾಸ ಪೂಜಾರಿ ಅವರು ವಿಧಾನಪರಿಷತ್ ವಿಪಕ್ಷ ನಾಯಕರಾಗಿ ಕೆಲಸ ಮಾಡುತ್ತಿದ್ದರು. ಬಸವರಾಜ ಬೊಮ್ಮಾಯಿ ಮತ್ತು ಕುಮಾರಸ್ವಾಮಿ ಅವರು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವುದರಲ್ಲಿ ನಿಷ್ಣಾತರಾಗಿದ್ದರು. ಇದೀಗ ಅವರಿಬ್ಬರೂ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶ ಪಡೆದಿರುವುದರಿಂದ ವಿಧಾನಸಭೆಯಲ್ಲಿ ಅವರ ಸ್ಥಾನ ತುಂಬುವ ಸದಸ್ಯರಿಲ್ಲದಂತಾಗಿದೆ.

ಸರ್ಕಾರವನ್ನು ಅಂಕಿಅಂಶಗಳಿಂದ ಕಟ್ಟಿ ಹಾಕಲು ಅಧಿಕಾರ ನಡೆಸಿ ಅನುಭವವಿದ್ದರೆ ಮಾತ್ರ ಸಾಧ್ಯ. ಅಧ್ಯಯನಶೀಲರಾಗಿದ್ದರೆ ಇನ್ನೂ ಸುಲಭ. ಹಾಲಿ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಅವರು ಸಮರ್ಥ ನಾಯಕರಾಗಿ ಹೊರ ಹೊಮ್ಮಲು ಇನ್ನೂ ಸಾಧ್ಯವಾಗಿಲ್ಲ. ಉಪ ಮುಖ್ಯಮಂತ್ರಿ, ಆರೋಗ್ಯ, ಕುಟುಂಬ ಕಲ್ಯಾಣ, ಕಂದಾಯ ಸಾರಿಗೆಯಂತಹ ಮಹತ್ವದ ಖಾತೆಗಳನ್ನು ನಿಭಾಯಿಸಿದ್ದರೂ ಅವರಿಗೆ ಆಡಳಿತವ ವೈಫಲ್ಯಗಳನ್ನು ಆಕರ್ಷಕ ರೀತಿಯಲ್ಲಿ ಪ್ರಸ್ತಾಪಿಸುವ ಹಿಡಿತ ಇನ್ನೂ ಸಿಕ್ಕಿಲ್ಲ. ಸದನದ ಒಳಗೆ ಮತ್ತು ಹೊರಗೆ ಅವರು ಸರ್ಕಾರವನ್ನು ಎದುಸಲು ನಡೆಸುತ್ತಿರುವ ಪ್ರಯತ್ನಗಳು ಪೇಲವ ಎನ್ನಿಸುತ್ತಿವೆ. ಸಮರ್ಥ ಎದುರಾಳಿ ಇಲ್ಲದೇ ಹೋದರೆ ಆಡಳಿತ ಪಕ್ಷದ ಹಾದಿ ಸುಲಭವಾಗುತ್ತದೆ. ಅಶೋಕ ಅವರನ್ನು ಪ್ರತಿಪಕ್ಷದ ನಾಯಕರನ್ನಾಗಿ ನೇಮಿಸಿದ ನಂತರ ಅವರಿಗೆ ಪಕ್ಷದೊಳಗೆ ನಿರೀಕ್ಷಿತ ಸಹಕಾರ ಸಿಕ್ಕಿಲ್ಲ. ಕಳೆದ ಬೆಳಗಾವಿ ಅಧಿವೇಶನದಲ್ಲಿಯೂ ಇದು ಸ್ಪಷ್ಟವಾಗಿ ಗೋಚರಿಸಿ ನಗೆಪಾಟಲಿಗೆ ಈಡಾಗಿದ್ದು ಸುಳ್ಳಲ್ಲ. ಅರವಿಂದ ಬೆಲ್ಲದ ಉಪ ನಾಯಕಗಿದ್ದರೂ ಅವರಿನ್ನೂ ಮೈಚಳಿ ಬಿಟ್ಟು ಸಕಾರದ ವಿರುದ್ಧ ತಿರುಗಿ ಬಿದ್ದಿಲ್ಲ. ಇವರಿಗೆ ಸಹಕಾರ ನೀಡಲು 9 ಸದಸ್ಯರ ಸಹಕಾರ ಸಮಿತಿ ರಚಿಸಿದ್ದರೂ ಯಾವುದೇ ಸಹಕಾರ ಸಿಕ್ಕಿಲ್ಲ. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ಸಮರ್ಥವಾಗಿ ಎದುರಿಸಲು ಬಿಜೆಪಿ, ಜೆಡಿಎಸ್ ಎರಡೂ ಪಕ್ಷಗಳು ಒಟ್ಟಾಗಿ ಹೋರಾಟ ನಡೆಸಲು ನಿರ್ಧರಿಸಿವೆ. ಇದಕ್ಕಾಗಿ ಅನುಭವಿ ಶಾಸಕರ ಹುಡುಕಾಟದಲ್ಲಿ ತೊಡಗಿವೆ.

> ಈ ಮಧ್ಯೆ ವಿಧಾನಸಭೆಯಲ್ಲಿ ಜಂಟಿ ಹೋರಾಟ ನಡೆಸಲು ಸಿದ್ದತೆಗಳು ನಡೆದಿರುವಾಗಲೇ ವಿಧಾನಸಭೆ ಪ್ರತಿಪಕ್ಷದ ಉಪ ನಾಯಕ ಸ್ಥಾನಕ್ಕೆ ಜೆಡಿಎಸ್ ಬೇಡಿಕೆ ಇರಿಸಿದೆ. ಬಹುಶಃ ಹಿರಿಯ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಈ ಸ್ಥಾನಕ್ಕೆ ನೇಮಿಸಲುವ ಬಯಕೆ ಹೊಂದಿದೆ. ಒಂದು ವೇಳೆ ಉಪ ನಾಯಕ ಸ್ಥಾನವನ್ನು ಬಿಟ್ಟುಕೊಟ್ಟರೆ ಪ್ರತಿಪಕ್ಷದ ಬಲ ಹೆಚ್ಚಲಿದೆ ಎಂಬ ಸಂದೇಶವನ್ನು ಜೆಡಿಎಸ್ ಮುಖಂಡರು ಬಿಜೆಪಿ ನಾಯಕರಿಗೆ ಕಳುಹಿಸಿದ್ದಾರೆ ಎಂದು ತಿಳಿದು ಬಂದಿದೆ.

> ಇದೇ ತಿಂಗಳ 13ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ವಿಧಾನಮಂಡಲದ ಅಧಿವೇಶನದ ದಿನಾಂಕ ನಿಗದಿಯಾಗುವ ಸಾಧ್ಯತೆಗಳಿವೆ. ಬಹುಶಃ ಜುಲೈ ಮಧ್ಯಭಾಗದಲ್ಲಿ ಅಧಿವೇಶನ ನಡೆಯಲಿರುವ ಸಾಧ್ಯತೆಗಳಿವೆ. ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಅವ್ಯವಹಾರ ಸೇರಿದಂತೆ ಅನೇಕ ವಿಷಯಗಳನ್ನು ಪ್ರಸ್ತಾಪಿಸಲು ವಿಪಕ್ಷಗಳಲ್ಲಿ ಸಿದ್ದತೆಗಳು ನಡೆಯುತ್ತಿವೆ. ಈ ಅವ್ಯವಹಾರದ ಹೊಣೆ ಹೊತ್ತು ಸಿದ್ದರಾಮಯ್ಯ ರಾಜೀನಾಮೆ ಸಲ್ಲಿಸಬೇಕೆಂದು ಪಟ್ಟು ಹಿಡಿದಿದೆ.

ವಿಧಾನಪರಿಷತ್‌ನಲ್ಲಿದ್ದ ಅನುಭವಿ ಸದಸ್ಯ ಕೋಟಾ ಶ್ರೀನಿವಾಸ ಪೂಜಾರಿ ಅವರೊಬ್ಬರು ಮಾತ್ರ. ಇದೀಗ ಅವರೂ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶ ಪಡೆದಿದ್ದಾರೆ. ಅವರ ಸ್ಥಾನವನ್ನು ತುಂಬಬಲ್ಲ ಮತ್ತೊಬ್ಬ ಸದಸ್ಯ ಬಿಜೆಪಿಯೊಳಗೆ ಕಂಡು ಬರುತ್ತಿಲ್ಲ. ಪ್ರತಿಪಕ್ಷದ ನಾಯಕರ ಆಯ್ಕೆಯಲ್ಲಿ ಅನುಭವದ ಜೊತೆಗೆ ಜಾತಿಯೂ ಮುಖ್ಯವಾಗುತ್ತದೆ. ಪ್ರಧಾನಮಂತ್ರಿಯಾಗಿ ನರೇಂದ್ರ ಮೋದಿ ಅಧಿಕಾರ ಸ್ವೀಕರಿಸಿದ ನಂತರ ವಿಪಕ್ಷ ನಾಯಕರ ಆಯ್ಕೆ ನಡೆಯಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪ್ರಜ್ವಲ್ ರೇವಣ್ಣಗೆ ಜೈಲು, ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ ನ್ಯಾಯಾಲಯ

• ಉದಯವಾಹಿನಿ, ಬೆಂಗಳೂರು

ಹಾಸನದ ಅತ್ಯಾಚಾರ ಪ್ರಕರಣದಲ್ಲಿ ವಿಶೇಷ ತನಿಖಾ ತಂಡದ ವಶದಲ್ಲಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜೈಲಿಗೆ ಕಳುಹಿಸಲಾಗಿದೆ. ಈಗಾಗಲೇ ಅತ್ಯಾಚಾರ ಪ್ರಕರಣದಲ್ಲಿ ಹನ್ನೊಂದು ದಿನದಿಂದ ಎಸ್‌ಐಟಿ ವಶದಲ್ಲಿಯೇ ಇದ್ದ ಪ್ರಜ್ವಲ್ ಅವರ ವಿಚಾರಣೆ ಬಳಿಕ ಸೋಮವಾರ ಬೆಂಗಳೂರಿನ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಎಸ್‌ಐಟಿ ವಿಶೇಷ ಅಭಿಯೋಜಕರು ಮುಚ್ಚಿದ ಲಕೋಟೆಯಲ್ಲಿ ಎಸ್‌ಐಟಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಅಲ್ಲದೇ ಪ್ರಜ್ವಲ್ ಅವರನ್ನು ಇನ್ನಷ್ಟು ಅವಧಿಗೆ ತಮ್ಮ ಕಸ್ಟಡಿಗೆ ನೀಡುವಂತೆ ಕೋರದೇ ಇರುವುದರಿಂದ ಅವರನ್ನು ಜೈಲುಗೆ ಕಳುಹಿಸಲಾಯಿತು. ಅವರು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲು ಸೇರಲಿದ್ದಾರೆ.

ಫಲಿತಾಂಶದಲ್ಲಿ ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳ ಅದ್ಭುತ ಸಾಧನೆ

• ಉದಯವಾಹಿನಿ, ಬೆಂಗಳೂರು

ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆಯ ಫಲಿತಾಂಶ (ಜೂನ್ 10) ಪ್ರಕಟವಾಗಿದ್ದು, ಭಾರತದ ಟಾಪ್ 20ರ ರಯಾಂಕ್ ಪಟ್ಟಿಯಲ್ಲಿ ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳು ಸ್ಥಾನವನ್ನು ಪಡೆದುಕೊಂಡಿದ್ದಾರೆ. ಶಾನ್ ಥಾಮಸ್ ಕೋಶಿ ಎಂಬ ವಿದ್ಯಾರ್ಥಿ 360ಕ್ಕೆ 325 ಅಂಕಗಳನ್ನು ಗಳಿಸಿದ್ದು, ಅಮೋಘ್ ಅಗರ್ವಾಲ್ 360ಕ್ಕೆ 322 ಅಂಕಗಳನ್ನುಗಳಿಸುವ (ಜೆಇಇ ಮೇನ್ಸ್‌ನಲ್ಲಿ ಶೇಕಡಾ 100ರಷ್ಟು ಅಂಕ) ಮೂಲಕ ಭಾರತದ ಟಾಪ್ 20ರ ರಯಾಂಕ್ ಪಟ್ಟಿಯಲ್ಲಿದ್ದಾರೆ. ಪ್ರೋಗ್ರಾಮಿಂಗ್ ಬಗ್ಗೆ ಒಲವು ಹೊಂದಿರುವ ಶಾನ್ ಥಾಮಸ್ ಕೋಶಿ ಅವರು ತನ್ನ ಬಿಡುವಿನ ವೇಳೆಯಲ್ಲಿ ಉಪಯುಕ್ತ ಅಪ್ಲಿಕೇಶನ್‌ಗಳನ್ನು ಕ್ರಿಯೆಟ್ ಮಾಡುತ್ತಿರುತ್ತಿರುತ್ತಾರೆ. ಇನ್ನು ಶಾನ್ ಅವರ ತಾಯಿ, ಇನ್ಫೋಸಿಸ್ ಉದ್ಯೋಗಿ ರೋಸ್ ಮೇರಿ ಜಾನ್ ಈ ಬಗ್ಗೆ ಪ್ರತಿಕ್ರಯಿಸಿದ್ದು, ಮಗ ಶಾನ್ ಪ್ರೋಗ್ರಾಮಿಂಗ್ ಅನ್ನು ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಅಲ್ಲದೆ, ಇತ್ತೀಚೆಗಷ್ಟೇ ಎಲ್ಲಾ ಫೋಟೋಗಳನ್ನು PDFಫಾರ್ಮ್ಯಾಟ್‌ಗೆ ಸ್ವಯಂಚಾಲಿತವಾಗಿ ಏಕೀಕರಿಸುವ ಅಪ್ಲಿಕೇಶನ್ ಅನ್ನು ಕ್ರಿಯೇಟ್ ಮಾಡಿದ್ದಾರೆ, ಎಂದು ಹೇಳಿದರು.

ಹರಿದಾಸ ವಾಣಿ ಗಾಯನ ಕಾರ್ಯ

• ಉದಯವಾಹಿನಿ, ಬೆಂಗಳೂರು

ಪವಮಾನಪುರದಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜ್ ಆಚಾರ್ ಅವರ ನೇತೃತ್ವದಲ್ಲಿ ಜೂನ್ 13, ಗುರುವಾರ ಸಂಜೆ 7-00ಕ್ಕೆ ಶ್ರೀಮತಿ ರಾಗಿಣಿ ರೋಹಿತ್ ಮತ್ತು ಸಂಗಡಿಗರಿಂದ ಹರಿದಾಸ ವಾಣಿ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ವ್ಯವಸ್ಥಾಪಕರಾದ ಶ್ರೀ ಗೊಗ್ಗಿ ಕೃಷ್ಣಾಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಬೆಂಗಳೂರು-560062

ಅಂತರ್ಜಲ ಬಳಕೆದಾರರು ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಈಗಾಗಲೇ ಕರ್ನಾಟಕ ಅಂತರ್ಜಲ ಪ್ರಾಧಿಕಾರ ಅಸ್ತಿತ್ವದಲ್ಲಿರುವುದರಿಂದ ಪ್ರಸ್ತುತ ಇರುವ ಹಾಗೂ ಹೊಸದಾಗಿ ಪ್ರಾರಂಭಿಸಿರುವ ಕೈಗಾರಿಕೆ/ವಾಣಿಜ್ಯ/ಮೂಲ ಸೌಕರ್ಯ ಅಭಿವೃದ್ಧಿ/ಗಣಿಗಾರಿಕೆ/ಮನರಂಜನೆ ಯೋಜನೆಗಳಲ್ಲಿನ ಅಂತರ್ಜಲ ಬಳಕೆದಾರರು ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಿಂದ ಪಡೆಯಬೇಕಾಗಿರುತ್ತದೆ. ಅದರಂತೆ ಸಂಬಂಧಪಟ್ಟ ಎಲ್ಲಾ ಕೈಗಾರಿಕೆ/ವಾಣಿಜ್ಯ/ಮೂಲ ಸೌಕರ್ಯ ಅಭಿವೃದ್ಧಿ/ಗಣಿಗಾರಿಕೆ/ಮನರಂಜನೆ ಯೋಜನೆಗಳಲ್ಲಿನ ಅಂತರ್ಜಲ ಬಳಕೆದಾರರು ಎನ್‌ಒಸಿ ಯನ್ನು ಪಡೆಯಲು https://kgwa.in/Public/ ವೆಬ್ಸೈಟ್ನ ಆನ್ಲೈನ್ ಸೇವೆಗಳಡಿ ಅರ್ಜಿ ಸಲ್ಲಿಸತಕ್ಕದ್ದು. ಟ್ಯಾಂಕರ್ ನೀರು ಸರಬರಾಜುಗೆ ಸಂಬಂಧಪಟ್ಟಂತೆ ಎನ್‌ಒಸಿ ಯನ್ನು ಪಡೆಯಲು ಆಯಾ ಜಿಲ್ಲೆಯ ಜಿಲ್ಲಾ ಅಂತರ್ಜಲ ಕಚೇರಿಗೆ ಭೌತಿಕವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಅಂತರ್ಜಲ ಕಚೇರಿಗಳನ್ನು ಸಂಪರ್ಕಿಸುವುದು ಎಂದು ಸರ್ಕಾರ ಪ್ರಕಟಣೆ ಹೊರಡಿಸಿದೆ.

ಡಿಕೆ ಸುರೇಶ್ ಪರ ಬೆಟ್ಟಿಂಗ್ ಕಟ್ಟಿ ನಷ್ಟ - ವ್ಯಕ್ತಿ ನೇಣು ಬಿಗಿದುಕೊಂಡು ಸಾವು!

• ಉದಯವಾಹಿನಿ, ಬೆಂಗಳೂರು

ಲೋಕ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿಕೆ ಸುರೇಶ್ ಪರ ಬೆಟ್ಟಿಂಗ್ ಕಟ್ಟಿದ್ದ ವ್ಯಕ್ತಿಯೊಬ್ಬ ಇಂದು ಬಿಡದಿ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 4 ಲಾರಿಗಳ ಮಾಲೀಕರಾಗಿದ್ದ ಬಿಡದಿಯ ಕೆಂಚನಕುಪ್ಪೆ ಗ್ರಾಮದ ನಿವಾಸಿ ಶಿವರಾಜು (44) ಈ ಬಾರಿ ಡಿಕೆ ಸುರೇಶ್ ಗೆಲ್ಲುತ್ತಾರೆ ಎಂದು ಎಂದು ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದ, ಆದರೆ ಸಾಲದ ಒತ್ತಡದಿಂದ ಎಂದು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸದ್ಯ ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

ದೊಡ್ಮನೆ ಹುಡುಗ ಯುವ ದಾಂಪತ್ಯದಲ್ಲಿ ಬಿರುಕು

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಎರಡು ದಿನಗಳ ಹಿಂದಷ್ಟೇ ಸ್ಯಾಂಡಲ್ ವುಡ್ ಕ್ಯೂಟ್ ಜೋಡಿ ಚಂದನ್ ಶೆಟ್ಟಿ-ನಿವೇದಿತಾ ಗೌಡ ವಿಚ್ಛೇದನ ಪಡೆದುಕೊಂಡು ಅಭಿಮಾನಿಗಳಿಗೆ ಆಘಾತವನ್ನುಂಟು ಮಾಡಿದ್ದರು. ಈ ಘಟನೆ ನಡೆದಿರುವಾಗಲೇ ದೊಡ್ಮನೆ ಹುಡುಗ ನಟ ಯುವ ರಾಜ್ ಕುಮಾರ್ ದಾಂಪತ್ಯದಲ್ಲಿಯೂ ಬಿರುಕು ಮೂಡಿದೆ ಎಂದು ತಿಳಿದುಬಂದಿದೆ.

ಯುವ ರಾಜ್ ಕುಮಾರ್ ಹಾಗೂ ಪತ್ನಿ ಶ್ರೀದೇವಿ ಬಾಳಲ್ಲಿ ಬಿರುಗಾಳಿ ಎದ್ದಿದ್ದು, ಇಬ್ಬರೂ ವೈವಾಹಿಕ ಜೀವನಕ್ಕೆ ಅಂತ್ಯ ಹಾಡಲು ನಿರ್ಧರಿಸಿದ್ದಾರೆ. ಯುವರಾಜ್ ಕುಮಾರ್, ಶ್ರೀದೇವಿ ವಿದ್ಯಾಭ್ಯಾಸ ಮಾಡುತ್ತಿದ್ದ ವೇಳೆ ಪರಸ್ಪರ ಪ್ರೀತಿಸಿ ಬಳಿಕ 2019ರಲ್ಲಿ ಮನೆಯವರನ್ನು ಒಪ್ಪಿಸಿ ವಿವಾಹವಾಗಿದ್ದರು. ನಾಲ್ಕು ವರ್ಷಗಳ ಕಾಲ ಜೊತೆಯಲ್ಲಿಯೇ ಇದ್ದ ದಂಪತಿ ಇದೀಗ ದೂರಾಗಲು ತೀರ್ಮಾನಿಸಿದ್ದಾರೆ. ಮೈಸೂರು ಮೂಲದ ಶ್ರೀದೇವಿ ಕಳೆದ ಒಂದು ವರ್ಷದಿಂದ ಅಮೆರಿಕಾದಲ್ಲಿ ವಾಸವಾಗಿದ್ದಾರೆ. ಒಂದು ವರ್ಷದಿಂದ ಯುವ ರಾಜ್ ಕುಮಾರ್ ಹಾಗೂ ಶ್ರೀದೇವಿ ದೂರವಿದ್ದಾರೆ ಎನ್ನಲಾಗಿದೆ. ಯುವ ರಾಜ್ ಕುಮಾರ್ ಅವರ ಮೊದಲ ಸಿನಿಮಾ ಪ್ರಮೋಷನ್‌ಗೂ ಪತ್ನಿ ಶ್ರೀದೇವಿ ಬಂದಿರಲಿಲ್ಲ. ಇದೀಗ ಯುವ ರಾಜ್ ಕುಮಾರ್ ಪತ್ನಿ ಶ್ರೀದೇವಿಗೆ ವಿಚ್ಛೇದನ ನೀಡಲು ನಿರ್ಧರಿಸಿದ್ದು, ವಿಚ್ಛೇದನಕ್ಕಾಗಿ ಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅಲ್ಲದೇ ಕೋರ್ಟ್ ಶ್ರೀದೇವಿ ಅವರಿಗೆ ನೋಟಿಸ್ ನೀಡಿದೆ ಎಂದು ತಿಳಿದುಬಂದಿದೆ. ಇದು ದೊಡ್ಮನೆಯಲ್ಲಿ ಮೊದಲ ವಿಚ್ಛೇದನ ಕೇಸ್ ಆಗಿದೆ.

ನಿಮ್ಮ ಮನೆ ಬಾಡಿಗೆಗೆ ಕೊಡ್ತೀರಾ: ಪೊಲೀಸ್ ಇಲಾಖೆ ಸಂದೇಶ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಸಲಹೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು

ನೀವು ನಿಮ್ಮ ಮನೆ ಅಥವಾ ವಾಣಿಜ್ಯ ಕಟ್ಟಡ ಬಾಡಿಗೆ/ಲೀಜ್‌ಗೆ ಕೊಟ್ಟಿದ್ದೀರಾ..ಇಲ್ಲವೇ ಕೊಡಲು ಇಚ್ಛಿಸಿದರೆ ರಾಜ್ಯ ಪೊಲೀಸ್ ಇಲಾಖೆಯ ಈ ಸಲಹೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಬಾಡಿಗೆ ಪಡೆಯುವವರ ಬಾಡಿಗೆದಾರರ ಸ್ವಂತ ಊರು ಪೂರ್ವಪರವನ್ನು ಮಾಲೀಕರು ತಿಳಿಯಬೇಕು. ಬಾಡಿಗದಾರರ ಆಧಾರ್ ಕಾರ್ಡ್, ಯಾವುದಾದರೂ ಸರ್ಕಾರಿ ಗುರಿತಿನ ಚೀಟಿ ಝೆರಾಕ್ಸ್ ಮತ್ತು ಮೊಬೈಲ್ ಸಂಖ್ಯೆಯನ್ನು ಮಾಲೀಕರು ಪಡೆದುಕೊಳ್ಳಬೇಕು.

ಬಾಡಿಗದಾರರು ಬಾಡಿಗೆ ಮನೆಯಲ್ಲಿ ಎಷ್ಟು ಜನ ಮತ್ತು ಯಾರು-ಯಾರು ವಾಸಿಸುತ್ತ

ಚನ್ನಪಟ್ಟಣ ಉಪ ಚುನಾವಣೆಗೆ ಅಚ್ಚರಿಯ ಅಭ್ಯರ್ಥಿ

● ನಾನು ಸೋಲನ್ನು ಒಪ್ಪಿಕೊಳ್ಳುತ್ತೇನೆ, ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ: ಡಿ ಕೆ. ಸುರೇಶ್

• ಉದಯವಾಹಿನಿ ರಾಮನಗರ

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಕೇಂದ್ರದಲ್ಲಿ ರಚನೆಯಾಗಿದೆ. ನರೇಂದ್ರ ಮೋದಿ ಭಾನುವಾರ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಎನ್‌ಡಿಎ ಮೈತ್ರಿಕೂಟದ ಪಾಲುದಾರ ಪಕ್ಷವಾಗಿರುವ ಜೆಡಿಎಸ್‌ಗೆ ಸಚಿವ ಸ್ಥಾನ ಸಿಕ್ಕಿದೆ.ಮಂಡ್ಯ ಸಂಸದ ಎಚ್. ಡಿ. ಕುಮಾರಸ್ವಾಮಿ ಸಂಪುಟ ದರ್ಜೆ ಸಚಿವರಾಗಿ ಮೋದಿ 3.0 ಸಂಪುಟ ಸೇರಿದರು. ರಾಮನಗರ ಜಿಲ್ಲೆಯ ಚನ್ನಪಟ್ಟಣ ಕ್ಷೇತ್ರದ ಹಾಲಿ ಶಾಸಕ ಎಚ್. ಡಿ. ಕುಮಾರಸ್ವಾಮಿ. 2024ರ ಲೋಕಸಭೆ ಚುನಾವಣೆಗೆ ಮಂಡ್ಯದಿಂದ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಜಯಗಳಿಸಿದ ಅವರು ಕೇಂದ್ರ ಸಚಿವರಾಗಿದ್ದು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ.

ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆ ಎದುರಾಗಲಿದೆ. ಬಿಜೆಪಿ-ಜೆಡಿಎಸ್ ಮೈತ್ರಿಯಲ್ಲಿ ಕ್ಷೇತ್ರ ಯಾರಿಗೆ?, ಅಭ್ಯರ್ಥಿ ಯಾರು? ಎಂಬುದು ಎಲ್ಲರ ಪ್ರಶ್ನೆ. ಇದರ ನಡುವೆ ಕಾಂಗ್ರೇಸ್ ಅಭ್ಯರ್ಥಿಯಾಗಿ ಬೆಂಗಳೂರು ಗ್ರಾಮಾಂತರದಲ್ಲಿ ಸೋಲು ಕಂಡ ಡಿ. ಕೆ. ಸುರೇಶ್ ಕಣಕ್ಕಿಳಿಯಲಿದ್ದಾರೆ? ಎಂಬ ಸುದ್ದಿಗಳು ಹಬ್ಬಿದ್ದವು.

ನನಗೆ ನಾನೇ ಶತ್ರು, ಈಗ ವಿರಾಮ



ಅಚ್ಚರಿಯ ಅಭ್ಯರ್ಥಿ ಆಯ್ಕೆ: ರಾಮನಗರದಲ್ಲಿ ಮಾತನಾಡಿದ ಡಿ. ಕೆ. ಸುರೇಶ್, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ. ಕಾಂಗ್ರೇಸ್‌ನಿಂದ ಅಚ್ಚರಿಯ ಅಭ್ಯರ್ಥಿ ಕಣಕ್ಕಿಳಿಯಲಿದ್ದಾರೆ ಎಂದು ಹೇಳಿದರು. ಈ ಮೂಲಕ ಉಪ ಚುನಾವಣೆಯ ಕಾವು ಹೆಚ್ಚಿಸಿದರು.

ನಾನು ಸೋಲನ್ನು ಒಪ್ಪಿಕೊಳ್ಳುತ್ತೇನೆ. ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ. ಡಿ. ಕೆ. ಸುರೇಶ್‌ನ ಸೋಲಿಸಿದ್ದೇವೆ ಏನೋ ಆಗಿಬಿಡುತ್ತದೆ ಎಂದುಕೊಂಡರೆ ಅದು ಭ್ರಮೆ. ನನಗೆ ನಾನೇ ಶತ್ರು, ಈಗ ವಿರಾಮ ಎಂದು ಲೋಕಸಭೆ ಚುನಾವಣೆ 2024ರ ಸೋಲಿನ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದರು.

2023ರ ವಿಧಾನಸಭೆ ಚುನಾವಣೆಯಲ್ಲಿ ಚನ್ನಪಟ್ಟಣದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವಿನ ಹೋರಾಟದ ಕುತೂಹಲ ಮೂಡಿಸಿತ್ತು. ಕಾಂಗ್ರೇಸ್ ಅಭ್ಯರ್ಥಿ ಗಂಗಾಧರ್ ಎಸ್. ಕೇವಲ 15,374 ಮತಗಳನ್ನು ಪಡೆದಿದ್ದರು. ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಎಚ್. ಡಿ. ಕುಮಾರಸ್ವಾಮಿ 96,592 ಮತಗಳನ್ನು ಪಡೆದು ಜಯಗಳಿಸಿದರು. ಬಿಜೆಪಿ ಅಭ್ಯರ್ಥಿ ಸಿ. ಪಿ. ಯೋಗೇಶ್ವರ 80,677 ಮತಗಳನ್ನು ಪಡೆದು ಸೋಲು ಕಂಡಿದ್ದರು.

ವಿಧಾನಸಭೆ ಚುನಾವಣೆ ಬಳಿಕ ಜೆಡಿಎಸ್ ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲ ಘೋಷಣೆ ಮಾಡಿತು. ವಿಧಾನ ಪರಿಷತ್, ಲೋಕಸಭೆ ಚುನಾವಣೆಯನ್ನು ಉಭಯ ಪಕ್ಷಗಳು ಸೀಟು ಹಂಚಿಕೆ ಮಾಡಿಕೊಂಡು ಎದುರಿಸಿವೆ. ಎನ್‌ಡಿಎ ಮೈತ್ರಿಕೂಟದ ಮಿತ್ರಪಕ್ಷವಾದ ಕಾರಣ ಎಚ್. ಡಿ. ಕುಮಾರಸ್ವಾಮಿ ಕೇಂದ್ರದಲ್ಲಿ ಸಚಿವರಾಗಿದ್ದಾರೆ.

ಚುನಾವಣೆ ಕುತೂಹಲಕ್ಕೆ ಕಾರಣ

ಚನ್ನಪಟ್ಟಣದ ಉಪ ಚುನಾವಣೆ ಕ್ಷೇತ್ರದಲ್ಲಿ ಭಾರೀ ಪ್ರಭಾವ ಹೊಂದಿರುವ, ಕೇಂದ್ರ ಸಚಿವರಾಗಿರುವ ಎಚ್. ಡಿ. ಕುಮಾರಸ್ವಾಮಿ ಅವರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಮತ್ತೊಂದು ಕಡೆ ರಾಮನಗರಲ್ಲಿ ಗೆಲವು ಸಾಧಿಸುವುದು ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಗೂ ಪ್ರತಿಷ್ಠೆಯಾಗಿದೆ. ಆದ್ದರಿಂದ ಚುನಾವಣೆ ಕುತೂಹಲಕ್ಕೆ ಕಾರಣವಾಗಿದೆ.

> ● ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಳೆದ ವಾರ ಮಾತನಾಡಿ, ಮೈತ್ರಿ ಧರ್ಮದಲ್ಲಿ ಚನ್ನಪಟ್ಟಣ, ಬಸವರಾಜ ಬೊಮ್ಮಾಯಿ ಅವರ ಕ್ಷೇತ್ರ ಯಾರಿಗೆ ಸಿಗಬೇಕು ಎಂದು ಸೂಕ್ತ ಸಮಯದಲ್ಲಿ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಹೇಳಿದ್ದರು. ಆದರೆ ಚನ್ನಪಟ್ಟಣ ಯಾರಿಗೆ ಎಂಬ ಗುಟ್ಟು ಬಿಟ್ಟುಕೊಟ್ಟಿರಲಿಲ್ಲ.
> -ನಿಖಿಲ್ ಕುಮಾರಸ್ವಾಮಿ

ಚನ್ನಪಟ್ಟಣ ಉಪ ಚುನಾವಣೆ ನಡೆದರೆ ಬಿಜೆಪಿ-ಜೆಡಿಎಸ್ ಮೈತ್ರಿಯಲ್ಲಿ ಕ್ಷೇತ್ರ ಬಿಜೆಪಿ ಪಾಲಾಗಲಿದೆ. ಸಿ. ಪಿ. ಯೋಗೇಶ್ವರ ಅಭ್ಯರ್ಥಿಯಾಗಲಿದ್ದಾರೆ ಎಂಬ ಸುದ್ದಿ. ಇದೆ. ಮತ್ತೊಂದು ಕಡೆ 2019ರಲ್ಲಿ ಮಂಡ್ಯ, 2023ರಲ್ಲಿ ರಾಮನಗರದಲ್ಲಿ ಸೋತ ನಿಖಿಲ್ ಕುಮಾರಸ್ವಾಮಿ ಚನ್ನಪಟ್ಟಣದಲ್ಲಿ ಅಭ್ಯರ್ಥಿಯಾಗಬಹುದು ಎಂಬ ಲೆಕ್ಕಾಚಾರವಿದೆ.

ಮಠದ ಆವರಣದಲ್ಲಿಯೇ ಸ್ವಾಮೀಜಿಯೊಬ್ಬರ ಭೀಕರ ಕೊಲೆ

• ಉದಯವಾಹಿನಿ ಮೈಸೂರು

ಮಠದ ಆವರಣದಲ್ಲಿಯೇ ಮಲಗಿದ್ದ ಸ್ವಾಮೀಜಿಯೊಬ್ಬರನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಸೋಮವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಸಾಂಸ್ಕೃತಿಕ ನಗರಿಯಲ್ಲಿ ಹಿರಿಯ ಸ್ವಾಮೀಜಿಯೊಬ್ಬರನ್ನು ಹತ್ಯೆ ಮಾಡಲಾಗಿದ್ದು ಭಕ್ತರು ಬೆಚ್ಚಿಬಿದ್ದಿದ್ದಾರೆ. ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಅನ್ನದಾನೇಶ್ವರ ಮಠದ ಶಿವಾನಂದ ಸ್ವಾಮೀಜಿ(90) ಅವರನ್ನು ಮಠದ ಅವರ ಕೊಠಡಿಯಲ್ಲೇ ಮಾರಕಾಸ್ತ್ರಗಳಿಂದ ಚುಚ್ಚಿ ಕೊಲೆ ಮಾಡಲಾಗಿದೆ.

ಸ್ವಾಮೀಜಿ ಅವರ ಭದ್ರತಾ ಸಿಬ್ಬಂದಿ ಸಹಾಯಕನಾಗಿದ್ದ ರವಿ(60) ಎಂಬಾತ ಸ್ವಾಮೀಜಿಯವರನ್ನು ಹತ್ಯೆ ಮಾಡಿದ್ದಾನೆಂದು ಮಠದಲ್ಲಿದ್ದ ಕೆಲವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಆತನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಮಠಕ್ಕೆ ನಜರ್‌ಬಾದ್ ಪೊಲೀಸರು ಭೇಟಿ ಪರಿಶೀಲನೆ ನಡೆಸಿ ಅಲ್ಲಿದ್ದ ಸಿಬ್ಬಂದಿಗಳು ಮತ್ತು ಮಠದಲ್ಲಿದ್ದವರಿಂದ ಮಾಹಿತಿ ಪಡೆದುಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೊಲೆಯಾದ ಸ್ವಾಮೀಜಿ ಅತ್ಯಂತ ಹಿರಿಯರು ಈ ಕೊಲೆ ಯಾವ ಕಾರಣಕ್ಕಾಗಿ ನಡೆದಿದೆ ಎಂದು ಗೊತ್ತಿಲ್ಲ. ಆದರೆ ಆಸ್ತಿ ವಿಚಾರದಲ್ಲಿ ಇದ್ದ ಭಿನ್ನಾಭಿಪ್ರಾಯದಿಂದ ಈ ಕೃತ್ಯ ಎಸಗಿರಬಹುದು ಎನ್ನುವ ಶಂಕೆಯಿದೆ. ವಿಷಯ ತಿಳಿದು ಮೈಸೂರು ಮಾತ್ರವಲ್ಲದೇ ನಾನಾ ಭಾಗಗಳಿಂದ ಭಕ್ತರು ಆರೋಪಿಯನ್ನು ಬಂಧಿಸಿ ಕಠಿಣ ಶಿಕ್ಷೆ ಕೊಡಿಸಬೇಕೆಂದು ಮಠದ ಭಕ್ತರು ಆಗ್ರಹಿಸಿದರು.

ಮೈಸೂರಿನ ಹಳೆಯ ಮಠಗಳಲ್ಲಿ ಒಂದಾದ ಅನ್ನದಾನೇಶ್ವರ ಮಠದಲ್ಲಿ ದಾಸೋಹ, ಧಾರ್ಮಿಕ ಚಟುವಟಿಕೆಗಳು ಮೊದಲಿನಿಂದಲೂ ನಡೆಯುತ್ತಿವೆ. ಈಗಲೂ ಚಟುವಟಿಕೆಗಳಿದ್ದು, ಹಿರಿಯರಾದ ಶಿವಾನಂದ ಸ್ವಾಮೀಜಿ ಮುಖ್ಯಸ್ಥರಾಗಿದ್ದರು.

ಮದ್ದೂರಿನಲ್ಲಿ ತಪ್ಪದ ಟ್ರಾಫಿಕ್ ಕಿರಿಕಿರಿ

• ಉದಯವಾಹಿನಿ ಮದ್ದೂರು

ಪಟ್ಟಣದ ಪೇಟೆ ಬೀದಿ ಸೇರಿದಂತೆ ಹಲವು ಪ್ರಮುಖ ರಸ್ತೆಗಳು ದಶಕಗಳಿಂದ ಕಿರಿಯದಾಗಿರುವ ಸಾರ್ವಜನಿಕರು ಪ್ರತಿನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ. ಐಬಿ ವೃತ್ತದಿಂದ ಕೊಲ್ಲಿ ಸರ್ಕಲ್ ಅನ್ನು ಸಂಪರ್ಕಿಸುವ ಪೇಟೆ ಬೀದಿಯು ಪಟ್ಟಣದ ಮಟ್ಟಿಗೆ ಅತ್ಯಂತ ಪ್ರಮುಖ ಬೀದಿಯಾಗಿದ್ದು, ಬೆಳಿಗ್ಗೆ ಹಾಗೂ ಸಂಜೆಯ ವೇಳೆಯಲ್ಲಿ ಈ ರಸ್ತೆಯ ಹಲವು ಕಡೆ ವಾಹನ ಚಾಲನೆ ಮಾಡುವುದು ಹರಸಾಹಸ ಮಾಡಿದಂತಾಗುತ್ತಿದೆ.

ಮೊದಲೇ ಕಿರಿಯದಾಗಿರುವ ರಸ್ತೆಯ ಇಕ್ಕೆಲಗಳ ಪಾದಚಾರಿ ಮಾರ್ಗದಲ್ಲಿಯೇ ತರಕಾರಿ, ಚಹಾ ಅಂಗಡಿ, ಹಾಲಿನ ಪಾರ್ಲರ್, ಹಲವು ಬಗೆಯ ಹೋಟೆಲ್‌ಗಳು, ಮೀನು ಮಾರಾಟ, ಜಿಲೇಬಿ ಅಂಗಡಿ ಸೇರಿದಂತೆ ಪಾನಿಪುರಿ, ಗೋಬಿ ಮಂಚೂರಿ ಸೇರಿದಂತೆ ಹಲವು ಫಾಸ್ಟ್ ಫುಡ್ ಅಂಗಡಿಗಳು ನಿತ್ಯ ತಲೆ ಎತ್ತುತ್ತಿವೆ. ಗ್ರಾಹಕರು ಅಂಗಡಿಗಳ ಮುಂದೆ ತಮ್ಮ ವಾಹನಗಳು ಬೇಕಾಬಿಟ್ಟಿಯಾಗಿ ವಾಹನಗಳು ನಿಲ್ಲಿಸುವುದರಿಂದ ಪಾದಚಾರಿಗಳಿಗೆ ನಡೆದುಕೊಂಡು ಹೋಗಲೂ ಜಾಗವಿಲ್ಲದಂತಾಗಿದೆ, ಅದರಲ್ಲೂ ತರಕಾರಿ ಅಂಗಡಿಗಳು ಪೂರ್ತಿ ಫುಟ್‌ಪಾತ್‌ಗಳನ್ನು ಆವರಿಸಿಕೊಂಡಿದ್ದು, ಪುರಸಭೆಯ ಅಧಿಕಾರಿಗಳು ಹಾಗೂ ಸದಸ್ಯರು ಇದನ್ನೆಲ್ಲಾ ನೋಡಿಯೂ ನೋಡಿದಂತಿದ್ದಾರೆ.

ಉದಯವಾಹಿನಿ ಚಿತ್ರ

ಅಷ್ಟೇ ಅಲ್ಲದೇ ಪೇಟೆಬೀದಿಯ ಸಂಪರ್ಕ ರಸ್ತೆಗಳಾದ ಎಸ್‌ಬಿಎಂ ರಸ್ತೆಯಲ್ಲಿ ಸಾಕಷ್ಟು ಅಂಗಡಿಗಳು ರಸ್ತೆಗೆ ಬಂದಿದ್ದು, ಸರ್ಕಾರಿ ಆಸ್ಪತ್ರೆಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಹೋಗುವ ರಸ್ತೆಯಲ್ಲಿರುವ ಜಾಮೀಯಾ ಶಾದಿ ಮಹಲ್ ಬಳಿಯಿರುವ ಅಂಗಡಿಗಳ ನಾಮಫಲಕಗಳನ್ನು ರಸ್ತೆಯಲ್ಲಿಯೇ ಇಡುವುದರಿಂದ ಹಾಗೂ ಶಾದಿ ಮಹಲ್‌ಗೆ ಬರುವವರು ವಾಹನಗಳನ್ನು ರಸ್ತೆಯ ಎರಡೂ ಕಡೆಗಳಲ್ಲಿಯೇ ಪಾರ್ಕಿಂಗ್ ಮಾಡಿ ಹೋಗುವುದರಿಂದ ಸಂಚಾರ ಸಮಸ್ಯೆಗಳು ಹೆಚ್ಚಾಗುತ್ತಿವೆ.

ದಂಡ ವಿಧಿಸುವುದೇ ಕಾಯಕ

ಇಷ್ಟಾದರೂ ಸಂಚಾರ ಪೊಲೀಸರು ಕೇವಲ ಹೆದ್ದಾರಿಯಲ್ಲಿ ನಿಂತುಕೊಂಡು ದಂಡ ವಿಧಿಸುವುದನ್ನೇ ಕಾಯಕ ಮಾಡಿಕೊಂಡಂತಿದ್ದು, ಪೇಟೆ ಬೀದಿಯಲ್ಲಿ ಒಂದಿಬ್ಬರು ಪೊಲೀಸ್ ಸಿಬ್ಬಂದಿ ನಿಯೋಜಿಸಿ ಸಂಚಾರ ದಟ್ಟನೆಯನ್ನಾಗಲೀ, ಸುರಕ್ಷತೆಯ ಬಗೆಯಾಗಲೀ ಗಮನಹರಿಸದೇ ಇರುವುದು ಮಾತ್ರ ವಿಪರ್ಯಾಸವಾಗಿದೆ.

ಕುಟುಂಬ ಆತ್ಮಹತ್ಯೆ ಯತ್ನ ಕೇಸ್‌ನಲ್ಲಿ ಮಹಿಳೆ ಸಾವು: ಸಚಿವರು ಭೇಟಿ

• ಉದಯವಾಹಿನಿ ಮೈಸೂರು

ಅಶ್ಲೀಲ ವೀಡಿಯೋ ವೈರಲ್ ಬೆದರಿಕೆಗೆ ಹೆದರಿ ಕುಟುಂಬದ ನಾಲ್ವರಿಂದ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ಪ್ರಕರಣದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಚಂದಗಾಲು ಗ್ರಾಮದ ಲೀಲಾವತಿ ಮೃತ ದುರ್ದೈವಿ. ಅಶ್ಲೀಲ ವೀಡಿಯೋ ವೈರಲ್ ಬೆದರಿಕೆಗೆ ಹೆದರಿದ ಕುಟುಂಬದ ನಾಲ್ವರು ಮಲೆ ಮಹದೇಶ್ವರ ಬೆಟ್ಟದ ತಪ್ಪಲಾದ ತಾಳಬೆಟ್ಟದಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು.

ಪ್ರಕರಣದ ದಿನವೇ ಮಹಾದೇವನಾಯಕ ಅಸುನೀಗಿದ್ದರೆ ಇಂದು ಮಹಾದೇವನಾಯಕ ಪುತ್ರಿ ಲೀಲಾವತಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ. ಮೃತ ಮಹಾದೇವನಾಯಕ ಪತ್ನಿ ಗೌರಮ್ಮ, ಅಪ್ರಾಪ್ತೆ ಮೊಮ್ಮಗಳು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಕರಣದ ಬಗ್ಗೆ ತಿಳಿಯಲು ಸಚಿವರಾದ ಕೆ.ವೆಂಕಟೇಶ್, ಡಾ. ಎಚ್.ಸಿ.ಮಹಾದೇವಪ್ಪ, ಚಾಮರಾಜನಗರ ಡಿಸಿ ಶಿಲ್ಪಾನಾಗ್, ಮೈಸೂರು ಡಿಸಿ ರಾಜೇಂದ್ರ ಸಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಸಂತ್ರಸ್ತರನ್ನು ಭೇಟಿ ಮಾಡಿದರು. ಸದ್ಯದ, ಆರೋಗ್ಯದ ಪರಿಸ್ಥಿತಿಗೆ ಬಗ್ಗೆ ವೈದ್ಯರಿಂದ ಸಚಿವರು ಮಾಹಿತಿ ಪಡೆದರು.

ಉದಯವಾಹಿನಿ ಚಿತ್ರ

ಮೃತ ಮಹದೇವನಾಯಕರ ಮೊಮ್ಮಗಳು ದ್ವಿತೀಯ ಪಿಯು ವಿದ್ಯಾರ್ಥಿನಿಯಾಗಿದ್ದು ಚೀರನಹಳ್ಳಿ ಗ್ರಾಮದ ಲೋಕೇಶ್ ಜೊತೆ ಸ್ನೇಹವಿತ್ತು. ಸ್ನೇಹವನ್ನೇ ಬಂಡವಾಳ ಮಾಡಿಕೊಂಡು ಸಲುಗೆ ಬೆಳೆಸಿಕೊಂಡ ಯುವಕ ಅಪ್ರಾಪ್ತೆಯನ್ನು ಚುಂಚನಕಟ್ಟೆಗೆ ಕರೆದೊಯ್ದು ಖಾಸಗಿ ವೀಡಿಯೋ ಸೆರೆ ಹಿಡಿದಿದ್ದ. ಬಳಿಕ, ತಾನು ಹೇಳಿದಿದ್ದನ್ನು ಕೇಳದಿದ್ದರೇ ಯುವಕನ ಆಟಾಟೋಪಕ್ಕೆ ಬೇಸತ್ತ ಮಹಾದೇವನಾಯಕ ಕುಟುಂಬ ಕೆ.ಆರ್.ನಗರ ಪೊಲೀಸರಿಗೆ ದೂರು ಕೊಟ್ಟರೂ ಯಾವುದೇ ಕ್ರಮ ವಹಿಸದ ಆರೋಪ ಕೇಳಿಬಂದಿದೆ.

ವಿಡಿಯೋ ಹರಿಬಿಡುವ ಆತಂಕ

ಪೊಲೀಸರು ಯಾವುದೇ ಕ್ರಮ ವಹಿಸದಿದ್ದದು, ವಿಡಿಯೋ ಹರಿಬಿಡುವ ಆತಂಕ ಎದುರಾಗಿ ಮಾನಕ್ಕೆ ಹೆದರಿದ ಕುಟುಂಬ ಶುಕ್ರವಾರ ಮಧ್ಯಾಹ್ನವೇ ಮಲೆ ಮಹದೇಶ್ವರ ಬೆಟ್ಟದತ್ತ ಬಂದಿದ್ದಾರೆ. ಮಾದಪ್ಪನ ಬೆಟ್ಟದ ತಪ್ಪಲಾದ ತಾಳುಬೆಟ್ಟದಲ್ಲಿ ಕಾಡಿನಹಾದಿಯಲ್ಲಿ ನಾಲ್ವರು ಕ್ರಿಮಿನಾಶಕ ಸೇವಿಸಿ, ಮಹಾದೇವನಾಯಕ ಮೃತಪಟ್ಟಿದ್ದು, ಮೂವರ ಸ್ಥಿತಿ ಚಿಂತಾಜನಕವಾಗಿತ್ತು. ಈಗ ಮಗಳು ಲೀಲಾವತಿ ಕೂಡ ಸಿಮ್ಸ್ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

ಸಿಬ್ಬಂದಿ ಕೊರತೆ ಕುಗ್ರಾಮದ ಬಡವರಿಗೆ ಆರೋಗ್ಯ ಸೇವೆ ಮರೀಚಿಕೆ

ಉದಯವಾಹಿನಿ ಚಿತ್ರ

• ಉದಯವಾಹಿನಿ ಕನಕಪುರ

ಕಡುಬಡವರು, ಕಾಡಂಚಿನ ಗಡಿಭಾಗದ ಕುಗ್ರಾಮದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಉಚಿತವಾಗಿ ಸಿಗಬೇಕು. ಯಾರು ಆರೋಗ್ಯ ಸಮಸ್ಯೆಯಿಂದ ಬಳಲಬಾರದು ಎಂದು ನಿರ್ಮಿಸಿರುವ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು, ಸಿಬ್ಬಂದಿ ಇಲ್ಲದೆ ರೋಗಿಗಳು ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ.

ತಮಿಳುನಾಡು ರಾಜ್ಯದ ಗಡಿಪ್ರದೇಶ ಹಂಚಿಕೊಂಡಿರುವ ತಾಲ್ಲೂಕಿನ ಕೋಡಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂತಹ ಪರಿಸ್ಥಿತಿ ಇದೆ.ಕೋಡಿಹಳ್ಳಿ ಹೋಬಳಿಯು 6 ಗ್ರಾಮ ಪಂಚಾಯಿತಿ, 3 ತಾಲ್ಲೂಕು ಪಂಚಾಯಿತಿ, 1 ಜಿಲ್ಲಾ ಪಂಚಾಯಿತಿ ಕ್ಷೇತ್ರ ಒಳಗೊಂಡಿದೆ. ಹೋಬಳಿಯು 50,000 ಜನಸಂಖ್ಯೆ ಹೊಂದಿದೆ. ಎಲ್ಲ ಇಲಾಖೆಗಳ ಕಚೇರಿ, ಬ್ಯಾಂಕ್ ಮತ್ತಿತರ ಸೌಕರ್ಯ ಹೊಂದಿದೆ. ಇಲ್ಲಿ ಕಾಯಂ ವೈದ್ಯರ ಸ್ಥಾನ ಕಳೆದ ಒಂದು ವರ್ಷದಿಂದ ಖಾಲಿ ಇದೆ. 5 ಪ್ರೈಮರಿ ಹೆಲ್ತ್ ಕೇರ್ ಆಫೀಸರ್ ಸ್ಥಾನ ಖಾಲಿ ಇದೆ. 1 ಹೆಲ್ತ್ ಇನ್‌ಸ್ಪೆಕ್ಟರ್ ಸ್ಥಾನ 3 ವರ್ಷದಿಂದ ಖಾಲಿ ಇದೆ. ವೈದ್ಯಾಧಿಕಾರಿ ಸ್ಥಾನ ಖಾಲಿ ಇರುವುದರಿಂದ ತಾತ್ಕಾಲಿಕವಾಗಿ ಕೋಟೆಕೊಪ್ಪ ಮತ್ತು ಹೊಸದುರ್ಗ ವೈದ್ಯರನ್ನು ಇಲ್ಲಿ ಪ್ರಭಾರಿಯಾಗಿ ನೇಮಕ ಮಾಡಲಾಗಿದೆ. ಬೇರೆ ಕಡೆ ಕೆಲಸ ನಿರ್ವಹಿಸಬೇಕಿರುವುದರಿಂದ ಇಲ್ಲಿನ ಪ್ರಭಾರ ವೈದ್ಯರು ಸರಿಯಾಗಿ ಬರುತ್ತಿಲ್ಲ, ಸಿಬ್ಬಂದಿ ಸರಿಯಾಗಿ ಸಿಗುತ್ತಿಲ್ಲ, ಹಾಗಾಗಿ ಆರೋಗ್ಯ ಸಮಸ್ಯೆಯಿಂದ ಬಳಲುವ ರೋಗಿಗಳು ಅನಿವಾರ್ಯವಾಗಿ ಕನಕಪುರ ಸರ್ಕಾರಿ ಆಸ್ಪತ್ರೆಗೆ ಹೋಗಬೇಕಿದೆ. ಕನಕಪುರದಿಂದ ಸುಮಾರು 60 ರಿಂದ 70ಕಿಲೋಮೀಟರ್‌ನಲ್ಲಿ ಈ ಹೋಬಳಿಯ ಗ್ರಾಮಗಳಿವೆ. ಹೆರಿಗೆ, ಶಸ್ತ್ರಚಿಕಿತ್ಸೆಯಂತಹ ಆರೋಗ್ಯ ಸೇವೆ, ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೂ ಕನಕಪುರಕ್ಕೆ ಬರಬೇಕಿದೆ.

ಗುಣಮಟ್ಟದ ಆರೋಗ್ಯ ಸೇವೆ

ಪಿಎಚ್‌ಸಿ ಮಲ್ಟೀಸ್ಪೆಶಾಲಿಟಿ ಹೆಲ್ತ್ ಸೆಂಟರ್ ಮಾಡುವ ಮೂಲಕ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಎಲ್ಲಾ ಸಮಯದಲ್ಲೂ ಸಿಗಬೇಕೆಂಬುದು ಇಲ್ಲಿನ ಜನರ ಒತ್ತಾಯವಾಗಿದೆ.

ಅನೈತಿಕ ಚಟುವಟಿಕೆ: ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿದ ಉದ್ಯಾನ

• ಉದಯವಾಹಿನಿ ಕೆಜಿಎಫ್

ನಗರದ ವ್ಯಾಪ್ತಿಯಲ್ಲಿರುವ ಹಲವು ಉದ್ಯಾನಗಳು ಸೂತ್ತ ನಿರ್ವಹಣೆ ಇಲ್ಲದ ಕಾರಣ ಸೊರಗಿ ಹೋಗಿವೆ. ಹಲವು ಉದ್ಯಾನಗಳು ಅನೈತಿಕ ಚಟುವಟಿಕೆಗಳ ತಾಣವಾಗಿದ್ದು, ಕುಡುಕರ ಹಾವಳಿಯಿಂದಾಗಿ ಮೂಲಸ್ವರೂಪವನ್ನೇ ಕಳೆದುಕೊಳ್ಳುವಂತಾಗಿವೆ.ಮಕ್ಕಳ ಆಟದ ಸಾಮಾನುಗಳು ಮುರಿದುಹೋಗಿ ನೇತಾಡುತ್ತಿವೆ. ಕಸ, ಮುಳ್ಳಿನ ಪೊದೆ, ಪಾರ್ಥೇನಿಯಂ ಗಿಡದಿಂದ ತುಂಬಿದ ಉದ್ಯಾನದಲ್ಲಿಯ

ಅಂತರಾಳದಿಂದ... EDITORIAL

3ನೇ ಬಾರಿಯ 'ವಿಸ್ತೃತ' ಸರ್ಕಾರವು 'ವಿಕಸಿತ ಭಾರತಕ್ಕೆ ಶ್ರಮಿಸಲಿ

ಲೋಕಸಭೆ ಚುನಾವಣೆ ಫಲಿತಾಂಶವು ಹಲವು ಬದಲಾವಣೆಗಳಿಗೆ ಕಾರಣವಾಗಿದೆ. ಬಿಜೆಪಿಗೆ ಇದ್ದ ಬಹುಮತ ಈಗ ಇಲ್ಲದ ಕಾರಣ ಮೈತ್ರಿಪಕ್ಷಗಳ ಮರ್ಜಿಗೆ ಕಾಯಬೇಕಿದೆ. ಅತ್ತ, ಕಾಂಗ್ರೇಸ್ ಮುಂದಾಳತ್ವದ ಇಂಡಿಯಾ ಒಕ್ಕೂಟವೂ ಬಲಿಷ್ಠವಾಗಿದೆ. ಹಾಗಾಗಿ, 3ನೇ ಅವಧಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿರುವ ನರೇಂದ್ರ ಮೋದಿ ಅವರು ಮೈತ್ರಿಪಕ್ಷಗಳ ಜತೆ ಸಮನ್ವಯ ಸಾಧಿಸುವ ಜತೆಗೆ ಪ್ರತಿಪಕ್ಷಗಳನ್ನೂ ಎದುರಿಸಬೇಕಿದೆ. ಇದರ ಮಧ್ಯೆ, ವಿಕಸಿತ ಭಾರತದ ಕನಸು ಸಾಕಾರಗೊಳ್ಳಲು ಕೂಡ ನೂತನ ಸರ್ಕಾರ ಹೆಚ್ಚು ಶ್ರಮ ವಹಿಸಬೇಕಿದೆ. ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಬಹುಮತ ಸಾಧಿಸಿದ್ದು, ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಇವರ ಜತೆಗೆ ಅನುಭವಿಗಳು, ಮೈತ್ರಿ ಪಕ್ಷಗಳ ಸಂಸದರು, ಯುವ ಸಂಸದರು ಸೇರಿ ಹಲವು ಮಾನದಂಡಗಳನ್ನು ಆಧರಿಸಿ ಆಯ್ಕೆ ಮಾಡಿದ 72 ಸಂಸದರು ಸಚಿವರಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದ್ದಾರೆ. ಸುಮಾರು 80 ದಿನಗಳಿಗೂ ಅಧಿಕ ಅವಧಿವರೆಗೆ 7 ಹಂತಗಳಲ್ಲಿ ಮತದಾನ ನಡೆದು, ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿ, ಈಗ ನರೇಂದ್ರ ಮೋದಿ ಅವರ ನೇತೃತ್ವದಲ್ಲಿಯೇ ಸತತ ಮೂರನೇ ಬಾರಿಗೆ ಎನ್‌ಡಿಎ ಸರ್ಕಾರವೇ ಅಧಿಕಾರಕ್ಕೆ ಬಂದಿದೆ.

ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಮೂಲ ಸೌಕರ್ಯ ಯೋಜನೆಗಳಿಗೆ ಒತ್ತು ನೀಡಿರುವುದು, ರೈಲು, ರೈಲು ನಿಲ್ದಾಣಗಳ ಆಧುನೀಕರಣ, ದಾಖಲೆ ವೇಗದಲ್ಲಿ ರಸ್ತೆ ನಿರ್ಮಾಣ, ಅತ್ಯಾಧುನಿಕ ವಿಮಾನ ನಿಲ್ದಾಣಗಳು ತಲೆ ಎತ್ತಿರುವುದು, ಇಸ್ರೋ ಬಾಹ್ಯಾಕಾಶ ಯೋಜನೆಗಳಿಗೆ ಉತ್ತೇಜನ ನೀಡಿರುವುದು ಸೇರಿ ಹಲವು ಕಾರ್ಯಕ್ರಮಗಳು ದೇಶದ ಅಭಿವೃದ್ಧಿ ಮಾನದಂಡವನ್ನು ದುಪ್ಪಟ್ಟುಗೊಳಿಸಿವೆ. ಇದರಿಂದಾಗಿ ಸರ್ಕಾರದ ಸಚಿವರು, ಸಂಸದರು ವಿಕಸಿತ ಭಾರತದ ಕಲ್ಪನೆಯ ಸಾಕಾರಗೊಳಿಸಲು ಹೆಚ್ಚಿನ ಶ್ರಮ ವಹಿಸಬೇಕು. ಹೊಸ ಹೊಸ ಯೋಜನೆಗಳು, ಯೋಜನೆಗಳ ಸಮರ್ಪಕ ಜಾರಿ ಮೂಲಕ ದೇಶದ ಏಳಿಗೆಗೆ ಇನ್ನಷ್ಟು ಕೊಡುಗೆ ನೀಡಬೇಕು.

ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಮೂಲ ಸೌಕರ್ಯ ಯೋಜನೆಗಳಿಗೆ ಒತ್ತು ನೀಡಿರುವುದು, ರೈಲು, ರೈಲು ನಿಲ್ದಾಣಗಳ ಆಧುನೀಕರಣ, ದಾಖಲೆ ವೇಗದಲ್ಲಿ ರಸ್ತೆ ನಿರ್ಮಾಣ, ಅತ್ಯಾಧುನಿಕ ವಿಮಾನ ನಿಲ್ದಾಣಗಳು ತಲೆ ಎತ್ತಿರುವುದು, ಇಸ್ರೋ ಬಾಹ್ಯಾಕಾಶ ಯೋಜನೆಗಳಿಗೆ ಉತ್ತೇಜನ ನೀಡಿರುವುದು ಸೇರಿ ಹಲವು ಕಾರ್ಯಕ್ರಮಗಳು ದೇಶದ ಅಭಿವೃದ್ಧಿ ಮಾನದಂಡವನ್ನು ದುಪ್ಪಟ್ಟುಗೊಳಿಸಿವೆ. ಇದರಿಂದಾಗಿ ಸರ್ಕಾರದ ಸಚಿವರು, ಸಂಸದರು ವಿಕಸಿತ ಭಾರತದ ಕಲ್ಪನೆಯ ಸಾಕಾರಗೊಳಿಸಲು ಹೆಚ್ಚಿನ ಶ್ರಮ ವಹಿಸಬೇಕು. ಹೊಸ ಹೊಸ ಯೋಜನೆಗಳು, ಯೋಜನೆಗಳ ಸಮರ್ಪಕ ಜಾರಿ ಮೂಲಕ ದೇಶದ ಏಳಿಗೆಗೆ ಇನ್ನಷ್ಟು ಕೊಡುಗೆ ನೀಡಬೇಕು.

ಹಾಗಾಗಿ, ಚುನಾವಣೆ ಸಮಯದ ರಾಜಕೀಯ ಮೇಲಾಟ, ಆರೋಪ, ಪ್ರತ್ಯಾರೋಪ, ಟೀಕೆ, ವ್ಯಂಗ್ಯ, ತಿರುಗೇಟುಗಳನ್ನು ಬಿಟ್ಟು, ಆಡಳಿತ ಪಕ್ಷದವರು ನರೇಂದ್ರ ಮೋದಿ ಅವರ 'ವಿಕಸಿತ ಭಾರತ' ನಿರ್ಮಾಣದ ಕನಸನ್ನು ನನಸಾಗಿಸಲು ಶ್ರಮಿಸಬೇಕಿದೆ. ಚುನಾವಣೆ ನೀತಿ ಸಂಹಿತೆ, ಫಲಿತಾಂಶದ ಹಿನ್ನೆಲೆಯಲ್ಲಿ ನಿಂತ ನೀರಾಗಿದ್ದ ಆಡಳಿತ ಯಂತ್ರಕ್ಕೆ ಈಗ ವೇಗ ನೀಡಬೇಕಿದೆ.

ಹಾಗೆ ನೋಡಿದರೆ, ವಿಕಸಿತ ಭಾರತದ ಕಲ್ಪನೆ ಸಾಕಾರಗೊಳಿಸಲು ದೇಶದಲ್ಲಿ ಸಕಾರಾತ್ಮಕ ವಾತಾವರಣವೇ ಇದೆ. ದೇಶದ ಜಿಡಿಪಿ ಬೆಳವಣಿಗೆಯ ಕುರಿತು ಅಂದಾಜಿಸಲಾಗಿದೆ. ಹಣದುಬ್ಬರವೂ ನಿಯಂತ್ರಣಕ್ಕೆ ಬರುತ್ತಿದೆ. ಕೇಂದ್ರದಲ್ಲಿ 10 ವರ್ಷಗಳಿಂದ ಇದ್ದ ಬಹುಮತದ ಸರ್ಕಾರ ಈಗಿಲ್ಲ. ಬಿಜೆಪಿಯು 240 ಸೀಟುಗಳಿಗೆ ಸೀಮಿತವಾಗಿದ್ದು, ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಹಾಗಾಗಿ, ಮೋದಿ ಸರ್ಕಾರವು ಸುಸ್ಥಿರ ಆಡಳಿತ ನೀಡಬೇಕು ಎಂದರೆ ಮೈತ್ರಿಕೂಟದಲ್ಲಿ ಸ್ಥಿರತೆ ಕಾಪಾಡಬೇಕು, ಸಮನ್ವಯತೆ ಸಾಧಿಸಬೇಕು. ಪ್ರಾದೇಶಿಕ ಪಕ್ಷಗಳಿಗೆ, ಪ್ರಾದೇಶಿಕ ಪಕ್ಷಗಳ ರಾಜ್ಯಗಳಿಗೆ ಹೆಚ್ಚಿನ ಮನ್ನಣೆ ನೀಡಬೇಕು. ಧರ್ಮ, ಜಾತಿಯ ವಿಷಯಗಳಿಗೆ ಪ್ರಾಮುಖ್ಯತೆ ಕೊಡದೆ, ಎಲ್ಲಾ ಮೈತ್ರಿ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರವನ್ನು ಮುನ್ನಡೆಸಬೇಕು. ಮೋದಿ ಸರ್ಕಾರವು ಉದ್ಯಮಿಗಳ ಪರವಾದ ಸರ್ಕಾರ ಎಂಬ ಕುಖ್ಯಾತಿ ಇತ್ತೀಚಿನ ವರ್ಷಗಳಲ್ಲಿ ಜಾಸ್ತಿಯಾಗಿದೆ. ಅಡುಗೆ ಅನಿಲ, ಪೆಟ್ರೋಲ್-ಡೀಸೆಲ್ ಸೇರಿ ಅಗತ್ಯ ವಸ್ತುಗಳ ಬೆಲೆಯೇರಿಕೆಯು ಬಡ ಹಾಗೂ ಮಧ್ಯಮ ವರ್ಗದವರನ್ನು ಹೈರಾಣಾಗಿಸಿದೆ. ಇಂತಹ ವಿಷಯಗಳ ಕುರಿತು ಮೋದಿ ಹಾಗೂ ಟೀಮ್ ಗಮನ ಹರಿಸಬೇಕು.

ಬಜೆಟ್‌ನಲ್ಲಿ ಬಡವರು ಹಾಗೂ ಮಧ್ಯಮ ವರ್ಗದವರಿಗೆ ನೇರವಾಗಿ ಅನುಕೂಲವಾಗುವ (ಕಿಸಾನ್ ಸಮ್ಮಾನ್, ಅಡುಗೆ ಅನಿಲ ಸಿಲಿಂಡರ್‌ಗಳಿಗೆ ಸಬ್ಸಿಡಿ ಹೆಚ್ಚಳ ಇತ್ಯಾದಿ) ಯೋಜನೆಗಳನ್ನು ಘೋಷಿಸಬೇಕು. ಕಳೆದ 10 ವರ್ಷಗಳಲ್ಲಿ ಲೋಕಸಭೆಯಲ್ಲಿ ಬಲಿಷ್ಠ ಪ್ರತಿಪಕ್ಷವೇ ಇರಲಿಲ್ಲ. ಕಾಂಗ್ರೇಸ್ ಸೇರಿ ಯಾವೊಂದು ಪಕ್ಷವೂ ಕೇಂದ್ರ ಸರ್ಕಾರಕ್ಕೆ ಸೆಡ್ಡು ಹೊಡೆಯುವಷ್ಟು ಸಮರ್ಥವಾಗಿರಲಿಲ್ಲ. ಇದು ಕೂಡ ಮೋದಿ ಸರ್ಕಾರಕ್ಕೆ ಅನುಕೂಲ ಮಾಡಿಕೊಟ್ಟಿತ್ತು. ಆದರೆ, ಫಲಿತಾಂಶದ ಬಳಿಕ ಚಿತ್ರಣ ಬದಲಾಗಿದೆ. ಕಾಂಗ್ರೇಸ್ 52 ಕ್ಷೇತ್ರಗಳಿಂದ 99 ಕ್ಷೇತ್ರಗಳಿಗೆ ತನ್ನ ಸದಸ್ಯ ಬಲವನ್ನು ಹೆಚ್ಚಿಸಿಕೊಂಡಿದೆ. ಇಂಡಿಯಾ ಒಕ್ಕೂಟವು ಒಗ್ಗಟ್ಟಾಗಿ 232 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಹಾಗಾಗಿ, ಸಮ್ಮಿಶ್ರ ಸರ್ಕಾರಕ್ಕೆ ಆಡಳಿತ ನಡೆಸುವುದು ಹಗ್ಗದ ಮೇಲಿನ ನಡಿಗೆಯೇ ಆಗಿದೆ. ಇನ್ನು, ಕಳೆದ 10 ವರ್ಷಗಳಿಂದ ಬಲಿಷ್ಠವಾಗಿ, ಸಮರ್ಥವಾಗಿ ಕಾರ್ಯನಿರ್ವಹಿಸದ ಪ್ರತಿಪಕ್ಷಗಳು ಇನ್ನಾದರೂ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು. ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಜನರ ಮುಂದಿಡಬೇಕು. ಸರ್ಕಾರಲಯ ತಪ್ಪಿದಾಗ ಸರಿದಾರಿಗೆ ತರಬೇಕು. ಸರ್ಕಾರಕ್ಕೆ ಆಗಾಗ ಎಚ್ಚರಿಕೆ ನೀಡುವ ಜತೆಗೆ ಚಾಟಿ ಬೀಸಬೇಕು. ಒಟ್ಟಿನಲ್ಲಿ, ಸಬಲ ಸಮ್ಮಿಶ್ರ ಸರ್ಕಾರ ಹಾಗೂ ಪ್ರಬಲ ಪ್ರತಿಪಕ್ಷಗಳು ಕೂಡಿ ದೇಶದ ಏಳಿಗೆಗೆ, ವಿಕಸಿತ ಭಾರತ ಕಲ್ಪನೆಯ ಸಾಕಾರಕ್ಕೆ ಶ್ರಮಿಸಬೇಕು ಎಂಬುದೇ ಎಲ್ಲರ ಆಶಯವಾಗಿದೆ.

ಶಿಕ್ಷಕರ ವಿದ್ವತ್ತಿಗೆ ಇಲ್ಲದ ಸಮ್ಮಾನ

ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಶಿಕ್ಷಕರು ಸಮಾಜದ ಅತ್ಯಂತ ಜವಾಬ್ದಾರಿಯುತ ಮತ್ತು ಪ್ರಮುಖ ಸದ್ಯಸರು ಏಕೆಂದರೆ ಅವರ ವೃತ್ತಿಪರ ಪ್ರಯತ್ನಗಳು ಭೂಮಿಯ ಭವಿಷ್ಯದ ಮೇಲೆ ಪರಿಣಾಮ ಬೀರುತ್ತವೆ.

ವ್ಯವಸ್ಥೆಯ ವ್ಯಂಗ್ಯ: ಗುರುವನ್ನು ದೇವರಿಗೆ ಸಮಾನವಾಗಿ ಕಾಣುವ ಸಂಸ್ಕೃತಿಯಲ್ಲಿ ಬೆಳೆದು ಬಂದವರು ಭಾರತೀಯರು. ಹೀಗಿರುವಾಗ ಒಂದು ಕಾಲದ ದೇವರನ್ನು ಇಂದು ತುಚ್ಚವಾಗಿ ಕಾಣುವಂಥ ಬದಲಾವಣೆಯಾಗಲು ಕಾರಣ ಪೋಷಕರ ಅತಿಯಾದ ಮಕ್ಕಳ ಮೇಲಿನ ಪ್ರೀತಿಯೇ ಇಲ್ಲಾ ಇಂದಿನ ಸಿನಿಮಾಗಳಲ್ಲಿ ಶಿಕ್ಷಕ ಪಾತ್ರವನ್ನು ನಗೆಪಾಟಲಿನ ಪಾತ್ರವಾಗಿ ಚಿತ್ರಿಸುವ ಕ್ರಮವೇ ಎಂದು ಪ್ರಶ್ನಿಸಿಕೊಂಡಾಗ, ಉತ್ತರ ಹೌದು ಎಂದು ಹೇಳದೇ ಇರಲು ಸಾಧ್ಯವಿಲ್ಲ (ಇದಕ್ಕೆ ಒಂದೆರಡು ಸಿನಿಮಾಗಳು ಹೊರತಾಗಿ ಬಹುದು) Teaching profession is a Noble profession ಎನ್ನುವ ಮಾತಿದೆ. ಆದರೆ, Noble profession ಅನ್ನು ನಿರ್ವಹಿಸುವ ಶಿಕ್ಷಕನ ಬಗ್ಗೆ ಗೌರವಾಧರಗಳನ್ನು ಇಟ್ಟುಕೊಳ್ಳದಿರುವುದು ವ್ಯವಸ್ಥೆಯ ವ್ಯಂಗ್ಯ.

ಟೀಚಿಂಗ್ ಸವಾಲಿನದು: ಇಂದು ಟೀಚಿಂಗ್ ತುಂಬಾ ಸವಾಲಿನದು ಏಕೆಂದರೆ ವಿದ್ಯಾರ್ಥಿಗಳ ಮನಸ್ಸನ್ನು ಮೊಬೈಲ್, ಲ್ಯಾಪ್ ಟಾಪ್, ಐಪ್ಯಾಡು ಗಳು ಆಕ್ರಮಿಸಿವೆ. ಅಲ್ಲದೆ ಇಯರ್ ಫೋನ್, ಸೆಲ್ಫಿಯ ಗುಂಗಿನಿಂದ ಬಿಡಿಸಿ, ತರಗತಿಯ ತನ್ಮಯತೆಯತ್ತಾ ಮರಳಿಸುವುದು ಸಾಹಸದ ಕೆಲಸ. ಪರಿಸ್ಥಿತಿ ಹೀಗಿದ್ದರೂ ಈಗಲೂ ಶಿಕ್ಷಕರು ವಿದ್ಯಾರ್ಥಿಗಳ ಹಿತವನ್ನೇ ಬಯಸುತ್ತಿರುತ್ತಾರೆ. ವಿದ್ಯಾರ್ಥಿಯ ಹಿತ ನನ್ನ ಆದ್ಯತೆ ಎಂದು ಭಾವಿಸುತ್ತಾರೆ ಆದರೆ ವಿದ್ಯಾರ್ಥಿಗಳು ಮಾತ್ರ ಶಿಕ್ಷಕರನ್ನು ಕಡೆಗಣಿಸುತ್ತಿದ್ದಾರೆ ಆದರೆ ಒಂದಂತೂ ಸತ್ಯ .ಮನೆಯಲ್ಲಿ ಶಿಕ್ಷಕರ ಬಗ್ಗೆ ಗೌರವದ ಭಾವನೆಯಿದ್ದರೆ, ಶಿಕ್ಷಕರ ಬಗ್ಗೆ ಮಕ್ಕಳಿಗೆ ಉತ್ತಮ ಪಾಠ ಮನೆಯಿಂದ ದೊರೆತರೆ ಹಾಗೂ ಶಿಕ್ಷಕರ ಬಗ್ಗೆ ಸಮಾಜದ ಭಾವನೆ ಬದಲಾದರೆ ಖಂಡಿತವಾಗಿಯೂ ವಿದ್ಯಾರ್ಥಿಗಳು ಬದಲಾಗಲು ಸಾಧ್ಯ ಈ ದಿಶೆಯಲ್ಲಿ ವಿದ್ಯಾರ್ಥಿಗಳಲ್ಲಿ ನೈತಿಕತೆಯನ್ನು ಜಾಗೃತಗೊಳಿಸುವ ಅಗತ್ಯವಿದೆ.

ವಿದ್ಯಾರ್ಥಿಗಳಲ್ಲಿ ನೈತಿಕತೆ ಜಾಗೃತ

ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳಿಗೆ ಶಿಕ್ಷಿಸಿದರೆ ವಿವಾದ

ನಾನು ವಿದ್ಯಾರ್ಥಿ ಯಾಗಿದ್ದ ಸಮಯದಲ್ಲಿ ಕೋಲಿನಿಂದ ಹೊಡೆದು ಕಲಿಸುತ್ತಿದ್ದರು. ಬಹುಶಃ ಪ್ರತಿ ಶಿಕ್ಷಕನ ಈ ಕ್ರಮದ ಹಿಂದೆ ಇದ್ದುದ್ದು ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ನೀಡಬೇಕು. ಸಚ್ಚಾರಿತ್ರ್ಯ ವ್ಯಕ್ತಿಯನ್ನಾಗಿ ರೂಪಿಸಬೇಕು. ಆದರೆ ಈಗ ಕೋಲು ಬಿಡಿ ಕೈಯಿಂದ ಹೊಡೆದರೂ ಅದರಲ್ಲಿ ಇಲ್ಲದ ವಿವಾದ ಸೃಷ್ಟಿಯಾಗುವ ಸಾಧ್ಯತೆಯೂ ಇದೆ ,ಕಾರಣ ಇಷ್ಟೇ .ಹಿತೋಪದೇಶ ಕೇಳಿಸಿಕೊಂಡ ವಿದ್ಯಾರ್ಥಿಯು ಮನೆಯಲ್ಲಿ ಎಂಥ ಬಣ್ಣ ಬಳಿದು ವರ್ಣಿಸಬಹುದು ಆತನ ಮನೆಯವರು ಬಂದು ಗಲಾಟೆ ಮಾಡಬಹುದೇ ಅದು ಪೊಲೀಸ್ ಠಾಣೆ ಮೆಟ್ಟಿಲೇರಿತೇ ಇಂಥ ಭೀತಿ ಪ್ರತಿಯೊಬ್ಬ ಶಿಕ್ಷಕರನ್ನೂ ಸದಾ ಕಾಡದೇ ಇರದು.

ಮನೆಯೇ ಮೊದಲ ಪಾಠಶಾಲೆ : ಜನನಿ ತಾನೇ ಮೊದಲ ಗುರು ಜನನಿಯಿಂದ ಪಾಠ ಕಲಿತ ಜನರೇ ಧನ್ಯರು.

ಮನೆಯೇ ಮೊದಲ ಪಾಠ ಶಾಲೆ ಎಂಬ ಮಾತು ಈ ನೆಲೆಯಲ್ಲಿ ಹುಟ್ಟಿಕೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ. ಹೀಗಾಗಿ ಪೋಷಕರು ಮಕ್ಕಳನ್ನು ಕೇವಲ ಹಣ ದುಡಿಯುವ ಯಂತ್ರಗಳನ್ನಾಗಿಸದೆ , ಪಾಠ ಒಪ್ಪಿಸುವ ಗಿಳಿಗಳಾಗಿಸದೆ, ಮಾನವೀಯತೆ ಮೆರೆಯುವ ಗಣಿಗಳಾಗಿಸಬೇಕು .ಮಕ್ಕಳು ಡಾಕ್ಟರ್, ಇಂಜಿನಿಯರ್,ಐಎಎಸ, ಕೆಎಎಸ್ ಇತ್ಯಾದಿ ಅಧಿಕಾರಿಗಳಾಗಬೇಕೆಂದು ಬಯಸುವ ಪಾಲಕರು, ಅವರು ಮೊದಲು ಮನುಷ್ಯರಾಗುವುದನ್ನು ಕಲಿಸಬೇಕು.

ಶ್ರೀ ಬಾಲಾಜಿ ಧರ್ಮಜಾಗೃತಿ ಸಮಿತಿಯ ವತಿಯಿಂದ
ಶಾಲೆಗಳಲ್ಲಿ ಸಂಸ್ಕಾರ ನೋಟ್ ಬುಕ್ ವಿತರಣೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀ ಬಾಲಾಜಿ ಧರ್ಮಜಾಗೃತಿ ಸಮಿತಿಯ ವತಿಯಿಂದ ''ಸಮಾಜ ಸಹಾಯ ಅಭಿಯಾನದ ಅಡಿಯಲ್ಲಿ ಬೆಂಗಳೂರಿನ ಬನಶಂಕರಿಯಲ್ಲಿರುವ ಸ್ವಾಮಿ ವಿವೇಕಾನಂದ ವಿದ್ಯಾಶಾಲಾ (ಪ್ರೌಢಶಾಲೆ)ಯಲ್ಲಿ 'ಸಂಸ್ಕಾರ ವಹಿ' ಅಂದರೆ ನೋಟ್‌ಬುಕ್‌ಗಳನ್ನು ವಿತರಿಸಲಾಯಿತು. 300 ಕ್ಕೂ ಹೆಚ್ಚು ವಿದ್ಯಾ ರ್ಥಿಗಳು ಇದರ ಲಾಭ ಪಡೆದುಕೊಂಡರು.

ಈ ಸಂದರ್ಭದಲ್ಲಿ ಶ್ರೀ ಬಾಲಾಜಿ ಧರ್ಮಜಾಗೃತಿ ಸಮಿತಿಯ ಕಾರ್ಯಕರ್ತರಾದ ಶ್ರೀಮತಿ ಧನಲಕ್ಷ್ಮೀ ವಿ.ಕೆ ಮಾತನಾಡಿ, ಸಂಸ್ಕಾರ ವಹಿಗಳ ಮಹತ್ವ ಮತ್ತು ಉದ್ದೇಶಗಳ ಬಗ್ಗೆ ಮಕ್ಕಳಿಗೆ ಪ್ರಭೋದನೆ ನೀಡಿದರು. 'ಇತ್ತೀಚಿನ ದಿನಗಳಲ್ಲಿ ಮಾರ್ಕೆಟ್‌ನಲ್ಲಿ ಸಿಗುವ ನೋಟ್ ಬುಕ್‌ಗಳ ಮುಖಪುಟದಲ್ಲಿ ಸಿನೆಮಾ ತಾರೆಯರ ಹಾಗೂ ಅರೆಬರೆ ಬಟ್ಟೆ ಧರಿಸಿದ ನಾನಾ ರೀತಿಯ ಚಿತ್ರ ಇರುವ ನೋಟ್ ಬುಕ್ ಗಳನ್ನು ವಿದ್ಯಾರ್ಥಿಗಳು ಖರೀದಿಸಬೇಕಾಗುತ್ತದೆ.

ಇಂತಹ ಸಂಸ್ಕಾರ ಹೀನ ಚಿತ್ರಗಳನ್ನು ನೋಡುತ್ತ ಅವರಲ್ಲಿ ನೈತಿಕತೆಯ ಬದಲು ಕೆಟ್ಟ ಸ್ವಭಾವಗಳ ಸಂಸ್ಕಾರವಾಗುವ ಸಂಭವವಿರುತ್ತದೆ. ಬಾಲ್ಯದಲ್ಲಿಯೇ ಸುಸಂಸ್ಕಾರಗಳ ಅಭ್ಯಾಸವಾದರೆ ಅವರ ಮುಂದಿನ ಜೀವನ ಆದರ್ಶ ಮತ್ತು ಉಜ್ವಲವಾಗುತ್ತದೆ. ಇಂದಿನ ಮಕ್ಕಳು ನಾಳಿನ ಪ್ರಜೆಗಳು, ಅದಕ್ಕಾಗಿ ಪ್ರತಿಯೊಬ್ಬರ ಭವಿಷ್ಯ ಆದರ್ಶವಾಗಲು ಈ ಸಂಸ್ಕಾರ ವಹಿಗಳನ್ನು ವಿತರಿಸಲಾಗುತ್ತಿದೆ' ಎಂದರು.

ಅವರು ನೋಟ್ ಬುಕ್‌ಗಳ ವಿಶೇಷತೆಯನ್ನು ವಿವರಿಸುತ್ತಾ, 'ಸಂಸ್ಕಾರ ವಹಿಯ ಮುಖಪುಟ ಹಾಗೂ ಹಿಂಬದಿಯ ಪುಟದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರ ಪುರುಷರ, ಒಳ್ಳೆಯ ರಾಜ್ಯಾಡಳಿತ ನಡೆಸಿ ಪ್ರಜೆಗಳ ಹಿತಕ್ಕಾಗಿಯೇ ದುಡಿದ ರಾಜ-ಮಹಾರಾಜರ ಆದರ್ಶಗಳು, ಒಳಗಿನ ಪುಟದಲ್ಲಿ ಸುಸಂಸ್ಕಾರ, ನೈತಿಕತೆಯ ಬಗ್ಗೆ ವಿಷಯ ಒಳಗೊಂಡಿರುತ್ತದೆ.

ನೋಟ್‌ಬುಕ್ ಗಳನ್ನು ವಿತರಿಸಣೆ

ಅದನ್ನು ಓದಿ ತಿಳಿದುಕೊಂಡು ಜೀವನದಲ್ಲಿ ಆಳವಡಿಸಿಕೊಂಡರೆ ಮಕ್ಕಳು 'ಆದರ್ಶ ವಿದ್ಯಾರ್ಥಿ'ಯಾಗಿ ರೂಪುಗೊಳ್ಳುವುದರಲ್ಲಿ ಸಂದೇಹವಿಲ್ಲ, ಇದರಿಂದ ಮುಂದೆ ಅವರು 'ಆದರ್ಶ ರಾಷ್ಟ್ರ' ಕಟ್ಟಲು ಸಾಧ್ಯವಾಗುವುದು' ಎಂದರು.

ಈ ಸಂದರ್ಭದಲ್ಲಿ ಸಮಿತಿಯ ಕಾರ್ಯಕರ್ತರಾದ ಸೌ. ಕೋಮಲ ಕಾಶಿ, ಶ್ರೀಮತಿ ಪುಣ್ಯವತಿ , ಸೌ. ಜಯಂತಿ, ಶಾಲೆಯ ಮುಖ್ಯೋಪಾಧ್ಯಾಯರಾದ ಕೆ. ಜಿ. ನಾಗರಾಜ್ ನಾಯ್ಕ್ ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಪದ್ಯ /ಶೀರ್ಷಿಕೆ ಪ್ರಧಾನಿ ನರೇಂದ್ರ ಮೋದಿ

ರಚನೆ: ಡಾ: ಸತ್ಯಮೂರ್ತಿ

• ಉದಯವಾಹಿನಿ, ವಿಶೇಷ

ಜೈ ಮೋದಿ ನಮ್ಮ ಮೋದಿ,
ಜೈ ಮೋದಿ ನಮ್ಮ ಮೋದೀಜಿ,
ಮೋದಿ ಎಂದರೆ ಆರ್ಭಟ
ಬಿಡೋದಿಲ್ಲ ಅವರೂ ಹಠ
ಅವರ ಮನಸ್ಸೇ ಸಂಕಲ್ಪ
ನಿದ್ರಿಸುವರೂ ಸ್ವಲ್ಪವೇ ಸ್ವಲ್ಪ,

// ಜೈ ಮೋದಿಜೀ//

ದೇಶಕ್ಕಾಗಿ ಜೀವನ ಮುಡಿಪಿಟ್ಯಾರು
ಚರಿತ್ರೆಯ ಸೃಷ್ಟಿ ಮಾಡ್ಯಾರು
3ನೇ ಬಾರಿಯೂ ಪ್ರಧಾನಿ ಪಟ್ಟಕ್ಕೇರಿ ದಾಖಲೆ ಬರೆದ್ಯಾರು.

// ಜೈ ಮೋದಿಜೀ//

ಭಾರತ ಕೀರ್ತಿಯ ವಿಶ್ವಕೆ ಏರಿಸ್ಯಾರು,
ಜಗದುದ್ದಗಲ ಸುತ್ಯಾರು
ಯೋಗದ ಮಹತ್ವ ವಿಶ್ವಕ್ಕೆ ಪರಿಚಯಿಸ್ಯಾರು.

// ಜೈ ಮೋದಿಜೀ//

ಸ್ವಚ್ಛ ಭಾರತ ಪರಿಕಲ್ಪನೆ ತಿಳಿಸ್ಕಾರು
ವಿಶ್ವಗುರುವೇ ಆದ್ಯಾರು
ದಿವ್ಯತ್ರಯರ ಧ್ಯಾನದಿ ಮಿಂದ್ಯಾರು

// ಜೈ ಮೋದಿಜೀ//

ಚಹಾಮಾರುವ ಕಾಯದಿಂದ ಪ್ರಧಾನಿ ಹುದ್ದೆಗೇರಾರು
ತಾಯಿಗೆ ತಕ್ಕ ಮಗ ಇವರಾದ್ಯಾರು
ಅವಿರತವಾಗಿ ದೇಶಕ್ಕೆ ಶ್ರಮಿಸ್ಯಾರು

// ಜೈ ಮೋದಿಜೀ//

ದೇಶರಕ್ಷಣೆಯ ಹೊಣೆ
ಹೊತ್ಯಾರು
ಸೈನಿಕರೊಂದಿಗೆ
ಮಿಳಿತವಾದ್ಯಾರು
ಪ್ರಜಾಪ್ರಭುತ್ವ ರಕ್ಷಿಸುವೆನೆಂದ್ಯಾರು

// ಜೈ ಮೋದಿಜೀ//

ಅಮ್ಮನ ಸೇವೆ ಮಾಡುತ ಎಪ್ಪತ್ತರಲ್ಲು ನಲಿದ್ಯಾರು
ಭಾರತದ ಹಿರಿಮೆಯೆ ಜಗಕೆ ಹೆಚ್ಚಿಸ್ಯಾರು
ವಂದೇ ವಿಶ್ವಕುಟುಂಬಕಂ ಪರಿಕಲ್ಪನೆ ಮೂಡಿಸ್ಯಾರು

// ಜೈ ಮೋದಿಜೀ//

ಸರ್ದಾರ್ ಪ್ರತಿಮೆ
ಲೋಕಾರ್ಪಣೆಗೊಳಿಸಾರು
ರಾಮಮಂದಿರ ಸಾಕಾರ ಮಾಡ್ಯಾರು
ವಿರೋದಿಗಳಿಗೆ ನಡುಕ ಹುಟ್ಟಿಸ್ಯಾರು

// ಜೈ ಮೋದಿಜೀ//

ಮೋದಿ 'ಅಲೆ' ಸೃಷ್ಟಿಸ್

ಯಾವುದೇ ಕೆಲಸ ಮಾಡಬೇಕಾದರೂ ದಾಖಲೆಗಳು ಅಗತ್ಯ

ವಿದ್ಯಾರ್ಥಿಗಳು ಜ್ಞಾನದಾಹಿಗಳಾಗಿ ನಿರಂತರ ಶ್ರಮದ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು: ಪತ್ರಕರ್ತ ಶೇರಿಕಾರ

• ಉದಯವಾಹಿನಿ,ಚಿಂಚೋಳಿ

ಉದಯವಾಹಿನಿ ಚಿತ್ರ

ನಾವು ಯಾವುದೇ ಕೆಲಸ ಮಾಡಬೇಕಾದರೂ ದಾಖಲೆಗಳ ಅಗತ್ಯವಿರುತ್ತದೆ, ಸಾವಿರಾರು ವರ್ಷ ಗಳ ಹಿಂದಿನ ದಾಖಲೆಗಳನ್ನು ಸಂಗ್ರಹಿಸುವ ಕೆಲಸ ಸುಲಭವಲ್ಲ.ವಿದ್ಯಾರ್ಥಿಗಳು ಜ್ಞಾನದಾಹಿಗಳಾಗಿ ನಿರಂತರ ಶ್ರಮದ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು. ಮೊಬೈಲ್‌ನಲ್ಲಿ ವ್ಯರ್ಥ ಕಾಲಹರಣ ಮಾಡದೇ ಮೋಬೈಲ್ ಜ್ಞಾನ ಸಂಪಾದನೆಗೆ ಬಳಸಿಕೊಳ್ಳುವ ಮೂಲಕ ಸ್ಪರ್ಧಾತ್ಮಕ ಪರೀಕ್ಷೆ ಸುಲಭವಾಗಿ ಎದುರಿಸಬಹುದಾಗಿದೆ ಎಂದು ಪತ್ರಕರ್ತ ಜಗನ್ನಾಥ ಡಿ.ಶೇರಿಕಾರ ಹೇಳಿದರು.

2.5ಲಕ್ಷ ಪುಟದಷ್ಟು ವಿವಿಧ ಮಾಹಿತಿ

ತಾಲ್ಲೂಕಿನ ಸುಲೇಪೇಟ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಪತ್ರಾಗಾರ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬರಗಾಲ ಎದುರಾದಾಗ ಜನರ ಹೊಟ್ಟೆ ತುಂಬಿಸಲು ನಿಜಾಮನು ಮುಸ್ಕಿಯಲ್ಲಿ ಉತ್ಪನನ ನಡೆಸಲು ರೂ 40 ಸಾವಿರ ಮಂಜೂರು ಮಾಡಿ ಕೂಲಿಗೆ ಕಾಳು ನೀಡಿದರು.

ಪತ್ರಾಗಾರ ಇಲಾಖೆ ರಾಜ್ಯದಲ್ಲಿ 2 ಕೋಟಿ ಪುಟ ದಾಖಲೆಗಳ ಡಿಜಿತಲೀಕರಣ ನಡೆಸಿದರೆ, ಕಳೆದ ಎರಡು ವರ್ಷಗಳಲ್ಲಿ ಕಲಬುರಗಿಯ ಪತ್ರಾಗಾರ ಇಲಾಖೆಯ ವಿಭಾಗೀಯ ಕಚೇರಿಯಿಂದ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ 2.5ಲಕ್ಷ ಪುಟದಷ್ಟು ವಿವಿಧ ಮಾಹಿತಿ ಮತ್ತು ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದರು.

ವಿಭಾಗೀಯ ಪತ್ರಾಗಾರ ಕಚೇರಿಯ ಸಹಾಯಕ ನಿರ್ದೇಶಕ ವೀರಶೇಟ್ಟಿ ಗಾರಂಪಳ್ಳಿ ಮಾತ ನಾಡಿದ ಅವರು, ಸುರಪುರ ಸಂಸ್ಥಾನದಲ್ಲಿ ಉತ್ತಮ ಆಡಳಿತದಿಂದ ಹೆಸರು ಮಾಡಿದ್ದ ಮಂತ್ರಿ ನಿಷ್ಠಿ ರುದ್ರಪ್ಪನವರ ಮೂಲ ಸುಲೇಪೇಟ 2.5ಲಕ್ಷ ಪುಟಗಳ ಮಾಹಿತಿಯನ್ನು ಇ ಲಾಖೆಯು ದಾಖಲೆಗಳ ಸಂಗ್ರಹ,ಸಂರಕ್ಷಣೆ ಮತ್ತು ಜಾಗೃತಿ ಕಾರ್ಯಕ್ರಮದ ಮೂಲಕ ಇತಿಹಾಸವನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿದೆ ಎಂದರು.

> ಬರಗಾಲ ಎದುರಾದಾಗ ಜನರ ಹೊಟ್ಟೆ ತುಂಬಿಸಲು ನಿಜಾಮನು ಮುಸ್ಕಿಯಲ್ಲಿ ಉತ್ಪನನ ನಡೆಸಲು ರೂ 40 ಸಾವಿರ ಮಂಜೂರು ಮಾಡಿ ಕೂಲಿಗೆ ಕಾಳು ನೀಡಿದರು. ಪತ್ರಾಗಾರ ಇಲಾಖೆ ರಾಜ್ಯದಲ್ಲಿ 2 ಕೋಟಿ ಪುಟ ದಾಖಲೆಗಳ ಡಿಜಿತಲೀಕರಣ ನಡೆಸಿದರೆ, ಕಳೆದ ಎರಡು ವರ್ಷಗಳಲ್ಲಿ ಕಲಬುರಗಿಯ ಪತ್ರಾಗಾರ ಇಲಾಖೆಯ ವಿಭಾಗೀಯ ಕಚೇರಿಯಿಂದ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ 2.5ಲಕ್ಷ ಪುಟದಷ್ಟು ವಿವಿಧ ಮಾಹಿತಿ ಮತ್ತು ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ
– ಜಗನ್ನಾಥ ಡಿ.ಶೇರಿಕಾರ, ಪತ್ರಕರ್ತರು ಚಿಂಚೋಳಿ

ಪ್ರಾಂಶುಪಾಲ ದಶರಥ ನಾಯನೂರ ಮಾತನಾಡಿ ಹೈದರಾಬಾದಿನ ನಿಜಾಮನು ದೇಶದ ಶ್ರೀಮಂತ ಅರಸ, ದೊರೆಯ ಕಚೇರಿಯ ಪೇಪರ್ ವೇಟ್ ರೂಪದಲ್ಲಿ ವಜ್ರ ಬಳಕೆ ಮಾಡುತ್ತಿದ್ದರು. ರೂ 3ಕೋಟಿ ನೀಡಿ ಸ್ಥಾಪಿಸಿದ ಉಸ್ಮಾನಿಯಾ ವಿವಿ ನಿಜಾಮನ ಶೈಕ್ಷಣಿಕ ಸಾಧನೆಯಾಗಿದೆ,ಉನ್ನತ ಶಿಕ್ಷಣವನ್ನು ದೇಶಿಯ ಭಾಷೆಯಲ್ಲಿ ನೀಡಿದ ಹಿರಿಮೆ ಹೊಂದಿದೆ,ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು,ಇತಿಹಾಸ ಅಧ್ಯಯನ ಮಾಡುವಾಗ ಓದುಗ ಪಕ್ಷಪಾತಿಯಾಗಿರಬಾರದು. ಸ್ಥಿತಪ್ರಜ್ಞನಾಗಿರಬೇಕು ಎಂದರು.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಬಸವರಾಜ ಭಾಗಾ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು, ಶಿವಶರಣಪ್ಪ ನಿಂಬರಗಿ ನಿರೂಪಿ ಸಿದರು,ಶಿವಾನಂದ ಹಿರೇಮಠ ವಂದಿಸಿದರು.

ಈ ಸಂದರ್ಭದಲ್ಲಿ ಶಿವಾನಂದ ಹಿರೇಮಠ, ದಯಾನಂದ ರಟಕಲ್, ವೀರಶೇಟ್ಟಿ, ಶಿವಶರಣಪ್ಪ ಸೇರಿದಂತೆ ಅನೇಕ ವಿಧ್ಯಾರ್ಥಿಗಳು ಸಿಬ್ಬಂದಿ ವರ್ಗದವರು ಇದ್ದರು.

ಪ್ರಧಾನಿ ನರೇಂದ್ರ ಮೋದಿ, ಹೆಚ್.ಡಿ ಕುಮಾರಸ್ವಾಮಿ ಪ್ರಮಾಣವಚನ, ಕಾರ್ಯಕರ್ತರು ವಿಜಯೋತ್ಸವ

• ಉದಯವಾಹಿನಿ,ಚಿಂಚೋಳಿ

ಉದಯವಾಹಿನಿ ಚಿತ್ರ

ಪಟ್ಟಣದ ಬಸ್ ನಿಲ್ದಾಣದ ಎದುರು ಬಿಜೆಪಿ ಜೆಡಿಎಸ್ ಕಾರ್ಯಕರ್ತರು ಕೇಂದ್ರದಲ್ಲಿ ನರೇಂದ್ರ ಮೋದಿ ಯವರು ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾಗಿ ಪ್ರ ಮಾಣವಚನ ಸ್ವೀಕಾರ, ಎನ್.ಡಿ.ಎ ಸರ್ಕಾರದಲ್ಲಿ ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷರು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿರವರು ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಜೆಡಿಎಸ್, ಬಿಜೆಪಿ ಪಕ್ಷದ ಮುಖಂಡರು ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಣೆ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡ ಗೋಪಾಲರಾವ ಕಟ್ಟಿಮನಿ, ಜೆಡಿಎಸ್ ಅಧ್ಯಕ್ಷ ರವಿಶಂಕರರೆಡ್ಡಿ ಮುತ್ತಂಗಿ, ಶ್ರೀಮಂತ ಕಟ್ಟಿಮನಿ, ಹಣಮಂತ ಪೂಜಾರಿ, ನಾಗೇಂದ್ರಪ್ಪಾ ಗುರಂಪಳ್ಳಿ, ಬಸವರಾಜ ಸಿರ್ಸಿ, ಎಸ್ಕೆ ಮುಖ್ತಾರ್, ಸೈಯದ್ ನಿಯಾಜ್ ಅಲಿ, ಚಂದ್ರಶೇಟ್ಟಿ ಜಾಧವ, ಭೀಮಶೇಟ್ಟಿ ಮುರುಡಾ, ಕೆಎಂ ಬಾರಿ, ಬಕ್ಕಪ್ರಭುಗೌಡ ಪಾಟೀಲ, ಸಿದ್ದಯ್ಯಸ್ವಾಮಿ ಕಪೂರ, ವೀರಾರೆಡ್ಡಿ, ರವಿ ಗಾರಂಪಳ್ಳಿ, ರಾಜೇಂದ್ರ ವರ್ಮಾ, ರಾಜಶೇಖರ ಉಡಗಿ, ಅಂಜಪ್ಪ ಪೂಜಾರಿ, ಮಂಜೂರ ಅಹೇಮದ್, ರ ಹಿಂ, ಮಲ್ಲಿಕಾರ್ಜುನ ಪೂಜಾರಿ, ಅನೇಕರಿದ್ದರು.

ಎಂಜಿಎಂ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣ

• ಉದಯವಾಹಿನಿ, ಉಡುಪಿ


ಉದಯವಾಹಿನಿ ಚಿತ್ರ

ಉಡುಪಿ ಎಂಜಿಎಂ ಕಾಲೇಜಿನ ಅಮೃತ ಮಹೋತ್ಸವದ ಅಂಗವಾಗಿ ಕಾಲೇಜಿನ ವಾಣಿಜ್ಯಶಾಸ್ತ್ರವಿಭಾಗದ ವತಿಯಿಂದ ಸುಸ್ಥಿರ ಜಾಗತಿಕ ವ್ಯಾಪಾರ ಅಭಿವೃದ್ಧಿ-ಅಡೆತಡೆಗಳನ್ನು ಮುರಿಯುವುದು, ಬದಲಾವಣೆಯನ್ನು ಸಬಲೀಕರಣಗೊಳಿಸುವುದು ಎಂಬ ಶೀರ್ಷಿಕೆಯ ಅಡಿಯಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಇದೇ ಜೂ. 13, 14ರಂದು ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಎಂಜಿಎಂ ಕಾಲೇಜಿನ ಪ್ರಾಂಶುಪಾಲ ಪ್ರೊ. ಲಕ್ಷ್ಮೀನಾರಾಯಣ ಕಾರಂತ ಹೇಳಿದರು.

ವಾಣಿಜ್ಯಶಾಸ್ತ್ರವಿಭಾಗದ ಪ್ರಾಧ್ಯಾಪಕಿ, ವಿಚಾರ ಸಂಕಿರಣದ ಸಂಚಾಲಕಿ ಡಾ. ಮಲ್ಲಿಕಾ ಶೆಟ್ಟಿ ಮಾತನಾಡಿ, ದೇಶದ ವಿವಿಧ ಭಾಗಗಳಿಂದ ಮತ್ತು ವಿದೇಶಗಳಿಂದ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಈಗಾಗಲೇ ತಮ್ಮ ಸಂಶೋಧನಾ ಪ್ರಬಂಧಗಳನ್ನು ಪ್ರಸ್ತುತಪಡಿಸಲು ಸೆಮಿನಾರ್‌ನಲ್ಲಿ ಭಾಗವಹಿಸಲು ನೋಂದಾಯಿಸಿಕೊಂಡಿದ್ದಾರೆ. ಜೂ. 13ರಂದು ಬೆಳಿಗ್ಗೆ 9.30ಕ್ಕೆ ಮಾಹೆಯ ಸಹಕುಲಾಧಿಪತಿ ಡಾ. ಎಚ್.ಎಸ್.ಬಲ್ಲಾಳ್ ಅವರು ವಿಚಾರ ಸಂಕಿರಣಕ್ಕೆ ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಯಾಗಿ ಎಂಜಿಎಂ ಕಾಲೇಜು ವಿಶ್ವಸ್ಥ ಮಂಡಳಿಯ ಅಧ್ಯಕ್ಷ ಟಿ.ಸತೀಶ್ ಯು.ಪೈ ಆಗಮಿಸಲಿದ್ದಾರೆ ಎಂದರು. ಜೂ. 14ರಂದು ನಿರ್ವಹಣಾ, ವಾಣಿಜ್ಯ ಕ್ಷೇತ್ರಗಳಲ್ಲಿನ ಬದಲಾಗುತ್ತಿರುವ ಮಾದರಿ ಬದಲಾವಣೆಯ ಕುರಿತು ಪ್ಯಾನಲ್ ಚರ್ಚೆ ನಡೆಯಲಿದ್ದು, ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

> ಈ ವಿಚಾರ ಸಂಕಿರಣದಲ್ಲಿ ಮುಂಬೈ, ಹೈದರಾಬಾದ್, ಮೈಸೂರು, ವೆಲ್ಲೂರು, ಕೊಯಮತ್ತೂರು, ಸಿಂಗಾಪುರದಲ್ಲಿರುವ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಮತ್ತು ಉದ್ಯಮದ ತಜ್ಞರು ಭಾಗವಹಿಸಲಿದ್ದು, ಸುಸ್ಥಿರ ಜಾಗತಿಕ ವ್ಯಾಪಾರ ಪದ್ಧತಿಗಳ ಕುರಿತು ತಮ್ಮ ಸಂಶೋಧನಾ ಸಂಶೋಧನೆಗಳನ್ನು ಹಂಚಿಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಜೂನ್ 14 ರಿಂದ 22ರ ವರೆಗೆ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ

• ಉದಯವಾಹಿನಿ, ಯಾದಗಿರಿ

ಉದಯವಾಹಿನಿ ಚಿತ್ರ

ಎಸ್‌ಎಸ್‌ಎಲ್ಸಿ ಪೂರಕ ಪರೀಕ್ಷೆ ಜೂನ್ 14 ರಿಂದ ಜೂನ್ 22 ರ ವರೆಗೆ ನಡೆಯಲಿದ್ದು, 29 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 8908 ವಿದ್ಯಾರ್ಥಿಗಳು ಹಾಜರಾಗಲಿದ್ದು ಅಧಿಕಾರಿಗಳು ಪರೀಕ್ಷೆಗೆ ಎಲ್ಲಾ ಸಿದ್ಧತೆ ಮಾಡಿಕೊಂಡು ಪರೀಕ್ಷೆಗಳು ಸುವ್ಯವಸ್ಥಿತವಾಗಿ, ಶಾಂತಿಯುತವಾಗಿ ಜರುಗುವಂತೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಡಾ.ಸುಶೀಲ ಬಿ. ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಪರೀಕ್ಷೆಯ ಜಿಲ್ಲೆಯಾದ್ಯಂತ ಭಯ, ನಕಲು ಮುಕ್ತವಾಗಿ ನಡೆಯಬೇಕು. ವಿದ್ಯಾರ್ಥಿಗಳಲ್ಲಿ ಪರೀಕ್ಷೆ ಬಗ್ಗೆ ಭಯ ಇರದಂತೆ ನೋಡಿಕೊಳ್ಳಬೇಕು. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡುವಂತೆ' ಸೂಚಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಪರೀಕ್ಷೆಯ ನಿಯಮಾವಳಿಗಳಂತೆ ಕಾರ್ಯನಿರ್ವಹಿಸಬೇಕು. ಒಂದು ವೇಳೆ ನಿರ್ಲಕ್ಷ್ಯ ಕಂಡುಬಂದಲ್ಲಿ ಇಲಾಖಾ ಕ್ರಮದಂತೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶದಲ್ಲಿ ನಿಷೇಧಿ ಪ್ರದೇಶ ಎಂದು ಜಿಲ್ಲಾಧಿಕಾರಿಗಳು ಘೋಷಿಸಿ ಮತ್ತು ಸುತ್ತಲಿನ ಝಿರಾಕ್ಸ್, ಕಂಪ್ಯೂಟರ್ ಮಳಿಗೆಗಳನ್ನು ಮುಚ್ಚುವಂತೆ ಆದೇಶಿಸಿದರು.

ಪರೀಕ್ಷಾ ಕೇಂದ್ರಗಳಿಗೆ ಸುರಕ್ಷತೆಗೆ ಪೊಲೀಸರು ಬಂದೋಬಸ್ತ್ ಗಾಗಿ ಸಮಯಕ್ಕಿಂತ ಮುಂಚಿತವಾಗಿಯೇ ತೆರಳಬೇಕು ಎಂದು ಸೂಚಿಸಿದ್ದಾರೆ.

ಪರೀಕ್ಷಾ ಕೇಂದ್ರಗಳಲ್ಲಿ ವಾಟರ್ ಬಾಯ್ ಗಳನೇ ಮಕವನ್ನು ರದ್ದುಪಡಿಸಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಕೊಠಡಿಗಳ ಅಂತರದಲ್ಲಿ ಕೊಠಡಿಯ ಹೊರಗೆ ವ್ಯವಸ್ಥೆ ಮಾಡಬೇಕು ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್‌ಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದರು.

ಸಿಇಓ ಗರಿಮಾ ಪನ್ವಾರ, ಖಜಾನೆ ಅಧಿಕಾರಿ ಮಾಲಿಂಗರಾಯ ಬಿ, ಡಿಡಿಪಿಐ ಮಂಜುನಾಥ, ಬಿಇಓಗಳಾದ ಜಾಹೀದ್ ಬೇಗಂ, ಬಸವರಾಜಸಿ, ಮಲ್ಲಿಕಾರ್ಜುನ ಪೂಜಾರಿ, ನೋಡಲ್ ಅಧಿಕಾರಿ ಬಸನಗೌಡ ಆಲ್ದಾಳ ಸೇರಿದಂತೆ ಪರೀಕ್ಷೆಗೆ ಜವಾಬ್ದಾರಿ ವಹಿಸಿದ ಇಲಾಖೆಯ ಅಧಿಕಾರಿಗಳು ಇದ್ದರು.

> ಪೂರಕ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಂಡು ಸುವ್ಯವಸ್ಥಿತವಾಗಿ ಶಾಂತಿಯುತವಾಗಿ ಜರುಗುವಂತೆ ಕ್ರಮವಹಿಸಿ
–ಡಾ.ಸುಶೀಲ ಬಿ., ಜಿಲ್ಲಾಧಿಕಾರಿ

ಅಡಿಕೆ ತೋಟದತ್ತ ಚಿತ್ತ..ಬರ ತಂದ ಸವಾಲು

• ಉದಯವಾಹಿನಿ, ದಾವಣಗೆರೆ

ಉದಯವಾಹಿನಿ ಚಿತ್ರ

ಅಡಿಕೆ ತೋಟ ಉಳಿಸಿಕೊಳ್ಳಲು 10 ಕೊಳವೆಬಾವಿ ಕೊರೆಯಿಸಿದ್ದ ಹೊನ್ನಾಳಿ ತಾಲ್ಲೂಕಿನ ಕೆಂಗಲಹಳ್ಳಿಯ ರೈತ ಷಣ್ಮುಖಪ್ಪ ಅವರಿಗೆ ನೀರು ಸಿಕ್ಕಿದ್ದು 5 ಕೊಳವೆಬಾವಿಗಳಲ್ಲಿ, ಅದೂ ಅಲ್ಪಸ್ವಲ್ಪ. ಅದರಲ್ಲೇ ತೋಟ ಉಳಿಸಿಕೊಳ್ಳಲು ಅವರ ಪರದಾಟ.. ಚನ್ನಗಿರಿ ತಾಲ್ಲೂಕಿನ ಪಾಂಡೋಮಟ್ಟಿಯ ಶಿವಕುಮಾರ್ ತಮ್ಮ ಎರಡೂವರೆ ಎಕರೆ ಅಡಿಕೆ ತೋಟ ಉಳಿಸಿಕೊಳ್ಳಲು ಕೊಳವೆಬಾವಿ ನೀರು ಸಿಗದಿದ್ದಾಗ ಮೊರೆ ಹೋಗಿದ್ದು ಟ್ಯಾಂಕರ್ ನೀರಿಗೆ.

ತೀವ್ರ ಬರದಿಂದ ಅಡಿಕೆ ತೋಟ ಒಣಗಿದ ಕಾರಣ ಕಂಗಾಲಾದ ದಾವಣಗೆರೆ ತಾಲ್ಲೂಕಿನ ಹೊನ್ನನಾಯ್ಕನಹಳ್ಳಿಯ ರೈತ ಬಸವರಾಜಪ್ಪ ತಮ್ಮ 2 ಎಕರೆ ಅಡಿಕೆ ತೋಟವನ್ನೇ ನಾಶಪಡಿಸಿದರು. ಇವು ಕಳೆದ ವರ್ಷದ ತೀವ್ರ ಬರದಿಂದ ಒಣಗಿದ ಅಡಿಕೆ ಗಿಡಗಳನ್ನು ಉಳಿಸಿಕೊಳ್ಳಲು ರೈತರು ಪರದಾಡಿದ ಕೆಲ ಉದಾಹರಣೆಗಳಷ್ಟೆ. ಇಂತಹ ಸಾವಿರಾರು ಉದಾಹರಣೆಗಳು ಜಿಲ್ಲೆಯಲ್ಲಿ ಸಿಗುತ್ತವೆ.

ಜಿಲ್ಲೆಯಲ್ಲಿ ಇತ್ತೀಚಿನ ಕೆಲ ವರ್ಷಗಳಲ್ಲಿ ಅಡಿಕೆ ತೋಟ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. 'ಅಡಿಕೆ ನಾಡು' ಖ್ಯಾತಿಯ ಚನ್ನಗಿರಿ ತಾಲ್ಲೂಕಿಗೆ ಸೀಮಿತವಾಗಿದ್ದ ಅಡಿಕೆ ಬೆಳೆ ಈಗ 'ಬರದ ನಾಡು' ಎಂಬ ಖ್ಯಾತಿಯ ಜಗಳೂರಿಗೆ ವಿಸ್ತರಿಸಿದ್ದನ್ನು ಗಮನಿಸಿದರೆ ಜಿಲ್ಲೆಯಲ್ಲಿ ಅಡಿಕೆ ಬೆಳೆಯುವ ಪ್ರದೇಶ ವಿಸ್ತೀರ್ಣರಾಗಿರುವ ಬಗೆ ಅರಿವಾಗುತ್ತದೆ.

ಜಾನುವಾರು ಕಳ್ಳತನ ಅವ್ಯಾಹತ ಹಸು ಸಾಕಣೆದಾರರಲ್ಲಿ ಹೆಚ್ಚಿದ ಆತಂಕ

• ಉದಯವಾಹಿನಿ, ನರಸಿಂಹರಾಜಪುರ

ಉದಯವಾಹಿನಿ ಚಿತ್ರ

ತಾಲ್ಲೂಕಿನಾದ್ಯಂತ ಜಾನುವಾರುಗಳ ಕಳ್ಳ ಸಾಗಾಣಿಕೆ ಮತ್ತೆ ಹೆಚ್ಚಿದ್ದು, ಹಸು ಸಾಕಣೆದಾರರಲ್ಲಿ ಆತಂಕ ಹೆಚ್ಚಿದೆ.ರಾತ್ರಿ ವೇಳೆ ಮನೆಗೆ ಹಿಂದಿರುಗದೆ ಪ್ರಮುಖ ಸ್ಥಳಗಳಲ್ಲಿ ಬೀಡು ಬಿಡುವ ದನಗಳನ್ನು ಗುರಿಯಾಗಿಟ್ಟುಕೊಂಡು ಜಾನುವಾರು ಕಳ್ಳರು, ಅವುಗಳನ್ನು ಕದ್ದು ಸಾಗಿಸುತ್ತಿದ್ದಾರೆ.

ಪಟ್ಟಣದ ವ್ಯಾಪ್ತಿಯಲ್ಲಿ ಹೆಚ್ಚಾಗಿ ಬೀಡಾಡಿ ದನಗಳು ಬೀಡು ಬಿಡುವ ಸ್ಥಳಗಳಾದ ಡಾ.ಅಂಬೇಡ್ಕರ್ ವೃತ್ತ, ಬಸ್ ನಿಲ್ದಾಣ, ಸುಂಕದಕಟ್ಟೆ, ಪ್ರವಾಸಿ ಮಂದಿರ ಸರ್ಕಲ್, ಜೈಲ್ ಬಿಲ್ಡಿಂಗ್ ಮತ್ತಿತರ ಪ್ರದೇಶಗಳಿಂದ ದನಗಳನ್ನು ಕಳ್ಳ ಸಾಗಣೆ ಮಾಡಲಾಗುತ್ತದೆ.

ಮಧ್ಯರಾತ್ರಿ 2ರಿಂದ 3ಗಂಟೆಯ ವೇಳೆಯಲ್ಲಿ ವಾಹನಗಳಲ್ಲಿ ಬರುವ ದನಗಳ್ಳರು, ಬೀಡಾಡಿ ದನಗಳಿಗೆ ಮಂಪರು ಬರುವ ಔಷಧಿ ಹಾಕಿರುವ ಬ್ರೆಡ್ ತಿನ್ನಲು ನೀಡುತ್ತಾರೆ. ನಂತರ ಅವುಗಳು ನಿದ್ದೆಗೆ ಜಾರಿದಾಗ ದನಗಳ ಮುಂಗಾಲನ್ನು ಎತ್ತಿ ವಾಹನಕ್ಕೆ ತುಂಬಿಸಿಕೊಂಡು ಹೋಗುತ್ತಾರೆ.

ದನಗಳ್ಳರು ವಾಹನದಲ್ಲಿ ಆಯುಧ ಇಟ್ಟುಕೊಂಡಿರುವುದರಿಂದ ಸಾರ್ವಜನಿಕರು ತಡೆಯಲು ಹೋದರೆ ಹಲ್ಲೆ ಮಾಡುವುದಕ್ಕೂ ಕೂಡ ಹಿಂಜರಿಯುವುದಿಲ್ಲ. ಹಾಗಾಗಿ ಏನೂ ಮಾಡದ ಸ್ಥಿತಿಯಿದೆ ಎನ್ನುತ್ತಾರೆ ಸ್ಥಳೀಯರು.

> ಈಚೆಗೆ ಸುಂಕದಕಟ್ಟೆ ವ್ಯಾಪ್ತಿಯಲ್ಲಿ ಬೆಳಿಗ್ಗೆ 4ಗಂಟೆ ವೇಳೆಗೆ ಮುಖ್ಯ ರಸ್ತೆ ಯಲ್ಲಿದ್ದ ಎರಡು ದನಗಳಲ್ಲಿ ಒಂದನ್ನು ವಾಹನಕ್ಕೆ ತುಂಬಿಸಿದರು. ಇನ್ನೊಂದನ್ನು ತುಂಬುವ ವೇಳೆಗೆ ದನ ಕೂಗಿಕೊಂಡಿದ್ದರಿಂದ ಬಿಟ್ಟು ಹೋದರು ಎಂದು ದನವನ್ನು ತುಂಬಿಸಿಕೊಂಡು ಹೋಗಿದ್ದನ್ನು ಕಂಡ ಪ್ರತ್ಯಕ್ಷದರ್ಶಿ ಮಹಿಳೆಯೊಬ್ಬರು ಪತ್ರಿಕೆಗೆ ತಿಳಿಸಿದರು.

ತಿಮ್ಮಾಪುರಕ್ಕೆ ರಸ್ತೆ ಸರ್ವೆ ಮಾಡಿಸಿ ಸಮಸ್ಯೆ ಬಗೆಹರಿಸಿ

• ಉದಯವಾಹಿನಿ, ಸಿಂಧನೂರು

ಉದಯವಾಹಿನಿ ಚಿತ್ರ

ಸುಕಾಲಪೇಟೆಯಿಂದ ತಿಮ್ಮಾಪೂರಕ್ಕೆ ಹೋಗುವ ಈ ದಾರಿ ಕಂದಾಯ ಇಲಾಖೆಯ ನಕಾಶೆ ಯಲ್ಲಿದ್ದು. ನೂರಾರು ವರ್ಷಗಳಿಂದ ತಿರುಗಾಡುತ್ತಾ ಬಂದಿದ್ದು, ಕರ್ನಾಟಕ ಸರ್ಕಾರದ ಕಾಡಾ ಇಲಾಖೆಯಿಂದ ಮತ್ತು ಎಂ.ಪಿ.ಅನುದಾನದಲ್ಲಿ ರಸ್ತೆ ನಿರ್ಮಾಣ ಮಾಡಲಾಗಿದ್ದು, ಈ ದಾರಿಯನ್ನು ಸರ್ವೇ ನಂ.20 ಅದರ ಮಾಲೀಕರಾದ ಪೊಲೀಸ್ ಕಾನ್ಸ್‌ಟೇಬಲ್ ವೆಂಕಟೇ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಮಧ್ಯಾಹ್ನ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದು ಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ.

ವೃಷಭ ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

ಮಿಥುನ ಜನರು ಮತ್ತು ಅವರ ಉದ್ದೇಶಗಳ ಬಗ್ಗೆ ಅವಸರದ ತೀರ್ಮಾನ ಕೈಗೊಳ್ಳಬೇಡಿ –ಅವರು ಒತ್ತಡದಲ್ಲಿರಬಹುದು ಮತ್ತು ಅವರಿಗೆ ನಿಮ್ಮ ಸಹಾನುಭೂತಿ ಮತ್ತು ತಿಳುವಳಿಕೆಯ ಅಗತ್ಯವಿರುತ್ತದೆ.

ಕರ್ಕಾಟಕ ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

ಸಿಂಹ ನಿಮ್ಮ ಅಸೂಯೆ ವರ್ತನೆ ನಿಮ್ಮನ್ನು ದುಃಖಿಗಳಾಗಿಯೂ ಮತ್ತು ಖಿನ್ನರಾಗಿಯೂ ಮಾಡಬಹುದು. ಆದರೆ ಇದು ಒಂದು ಸ್ವಯಂಕೃತ ಗಾಯವಾಗಿರುವುದರಿಂದ ಇದರ ಬಗ್ಗೆ ಪ್ರಲಾಪಿಸುವ ಅಗತ್ಯವಿಲ್ಲ.

ಕನ್ಯಾ ಗುಂಪಿನಲ್ಲಿದ್ದಾಗ ನೀವೇನು ಹೇಳುತ್ತೀರೆಂದು ಎಚ್ಚರ ವಹಿಸಿ–ನಿಮ್ಮ ಹಠಾತ್ ಟೀಕೆಗಳಿಗೆ ನೀವು ತೀವ್ರವಾಗಿ ಟೀಕೆ ಎದುರಿಸಬೇಕಾಗಬಹುದು. ಪ್ರಣಯ ಸಂಬಂಧದಲ್ಲಿ ನಿಮ್ಮನ್ನು ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆಯಿದೆ.

ತುಲಾ ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

ವೃಶ್ಚಿಕ ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಆಪ್ತರೊಂದಿಗೆ ಜಗಳ ವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯವರೆಗೂ ಹೋಗ ಬಹುದು. ಇದರ ಕಾರಣದಿಂದ ನಿಮ್ಮ ವಿಶೇಷ ಹಣ ಖರ್ಚಾಗಬಹುದು.

ಧನಸ್ಸು ನಿಮ್ಮ ಸುತ್ತಲಿನ ಸುಮಾರು ತುಂಬ ಬೇಡಿಕೆಯಿಡುತ್ತಾರೆಂದು ನಿಮಗ ನಿಸುತ್ತದೆ–ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ– ಮತ್ತು ಇತರರನ್ನು ಸಂತೋಷಪಡಿಸಲು ನಿಮ್ಮ ಮೇಲೆ ಒತ್ತಡ ಹಾಕಬೇಡಿ.

ಮಕರ ನಿಮ್ಮ ಭಾವನೆಗಳನ್ನು ವಿಶೇಷವಾಗಿ ಕೋಪವನ್ನು ನಿಯಂತ್ರಿಸಲು ಪ್ರಯತ್ನಿಸಿ. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು.

ಕುಂಭ ನಿಮ್ಮ ಕಣ್ಣೀರನ್ನು ಒಬ್ಬ ವಿಶೇಷ ಸ್ನೇಹಿತ ಒರೆಸಬಹುದು. ನಿಮ್ಮ ಸುತ್ತ ನಡೆಯುವುದನ್ನು ನೋಡಿಕೊಳ್ಳಿ – ಇಂದು ನೀವು ಮಾಡಿದ ಕೆಲಸಕ್ಕೆ ಬೇರೆಯವರು ಗೌರವ ತೆಗೆದುಕೊಳ್ಳಬಹುದು.

ಮೀನ ನೀವು ನಿರಾಸೆ ಅನುಭವಿಸುತ್ತೀರಿ. ಅದೇಕೆಂದರೆ ನೀವು ಬಯಸುತ್ತಿದ್ದ ಪ್ರತಿಫಲಗಳು ಮುಂದೂಡಲ್ಪಡುತ್ತವೆ. ಈ ರಾಶಿಚಕ್ರದ ಜನರಿಗೆ ಇಂದು ತಮ್ಮನ್ನು ತಾವೇ ಅರ್ಥಮಾಡಿಕೊಳ್ಳುವ ಅಗತ್ಯವಿದೆ.

21 ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿದ ಸೈನಿಕನಿಗೆ ಗೌರವ

ದೇಶಕ್ಕಾಗಿ ತಮ್ಮ ಪ್ರಾಣವನ್ನೂ ಅರ್ಪಿಸಲು ಹಿಂದೇಟು ಹಾಕದ ದೇಶಭಕ್ತರಿರುವುದರಿಂದಲೇ ಭಾರತ ಇಂದು ವಿಶ್ವಗುರು

• ಉದಯವಾಹಿನಿ ಮುದ್ದೇಬಿಹಾಳ

ಸೈನಿಕರಾಗಿ ದೇಶ ಸೇವೆ ಸಲ್ಲಿಸುವ ಭಾಗ್ಯ ಎಲ್ಲರಿಗೂ ಸಿಗುವಂಥದ್ದಲ್ಲ. ಭಾರತಾಂಬೆಯ ಸೇವೆ ಸಂಕಲ್ಪ ತೊಟ್ಟ ಪರಿಶ್ರಮಿಗಳಿಗೆ ಅಂಥ ಅವಕಾಶ ಸಿಗುತ್ತದೆ. ದೇಶಕ್ಕಾಗಿ ತಮ್ಮ ಪ್ರಾಣವನ್ನೂ ಅರ್ಪಿಸಲು ಹಿಂದೇಟು ಹಾಕದ ದೇಶಭಕ್ತರಿರುವುದರಿಂದಲೇ ಭಾರತ ಇಂದು ವಿಶ್ವಗುರುವಾಗಿ ಬೆಳೆಯುವತ್ತ ದಾಪುಗಾಲು ಹಾಕುತ್ತಿದೆ ಎಂದು ಪುರಸಭೆಯ ಮಾಜಿ ಸದಸ್ಯ ನಗರಾಭಿವೃದ್ಧಿ ಯುವ ಹೋರಾಟ ವೇದಿಕೆಯ ಸಂಚಾಲಕ ಬಸಯ್ಯ ನಂದಿಕೇಶ್ವರಮಠ ಹೇಳಿದರು.

ಭಾರತ ವಿಶ್ವಗುರುವಾಗಿ ಬೆಳೆಯುವತ್ತ ದಾಪುಗಾಲು

ಅವರು ರವಿವಾರ ಭಾರತೀಯ ಇಂಜಿನಿಯರಿಂಗ್ ವಿಭಾಗದ ತಾಂತ್ರಿಕ ಸಿಬ್ಬಂದಿಯಾಗಿ 21 ವರ್ಷ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿ ಸ್ವಗ್ರಾಮಕ್ಕೆ ಆಗಮಿಸಿದ ನಿವೃತ್ತ ಯೋಧ ನಜೀರಪಟೇಲ್ ಬೇವಿನಗಿಡದ ಅವರಿಗೆ ಪಟ್ಟಣದ ಸೈನಿಕ ಮೈದಾನದ ಸ್ಮಾರಕದಲ್ಲಿ ಮಾಜಿ ಸೈನಿಕರ ಸಂಘ ಮತ್ತು ಕಾರ್ಗಿಲ್ ಹುತಾತ್ಮ ಯೋಧರ ಸ್ಮಾರಕ ಸಮಿತಿಯಿಂದ ನಡೆದ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ತಾಲೂಕು ಘಟಕದ ಅಧ್ಯಕ್ಷ ಆರ್.ಐ.ಹಿರೇಮಠ ಅವರು ಮಾತನಾಡಿ, ದೇಶಕ್ಕಾಗಿ ಪ್ರಾಣ ಅರ್ಪಿಸಲೂ ಹಿಂದೇಟು ಹಾಕದ ಸೈನಿಕರಿರುವುದರಿಂದಲೇ ದೇಶ ಇಂದು ಎಲ್ಲಾ ಬಾಹ್ಯ ಬೆದರಿಕೆಗಳಿಂದ ಸುರಕ್ಷಿತವಾಗಿದೆ. ದೇಶಸೇವೆಯ ನಂತರ ನಿವೃತ್ತರಾಗಿ ಮರಳುವ ಮಾಜಿ ಸೈನಿಕರಿಗೆ ಸರ್ಕಾರದ ಸೌಲಭ್ಯಗಳು ಸುಲಭವಾಗಿ ದೊರಕು ವಂಥ ವ್ಯವಸ್ಥೆ ಜಾರಿಯಾಗಬೇಕು ಎಂದ ಅವರು ನಜೀರ್‌ಪಟೇಲ ಅವರ 21 ವರ್ಷಗಳ ಸೇವಾ ವಿವರದ ಮಾಹಿತಿ ನೀಡಿದರು. ಹೈದ್ರಾಬಾದ್‌ನ ತರಬೇತಿ ಕೇಂದ್ರದಲ್ಲಿ ನಿವೃತ್ತರಾಗಿದ್ದ ನಜೀರಪಟೇಲ ಅವರು ಅಲ್ಲಿಂದ ರೈಲ್ವೆ ಮುಖಾಂತರ ವಿಜಯಪುರ ರೈಲು ನಿಲ್ದಾಣಕ್ಕೆ ಆಗಮಿಸಿದ್ದರು. ವಿಜಯಪುರದಿಂದ ಮುದ್ದೇಬಿಹಾಳ ಮಾರ್ಗವಾಗಿ ಸ್ವಗ್ರಾಮ ಗುಡ್ನಾಳಕ್ಕೆ ತೆರಳುವುದನ್ನು ಅರಿತು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಆರ್.ಐ.ಹಿರೇಮಠ, ಕಾರ್ಗಿಲ್ ಹುತಾತ್ಮ ಯೋಧರ ಸ್ಮಾರಕ ಸಮಿತಿ ಪದಾಧಿಕಾರಿಗಳು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ನಜೀರ್‌ಪಟೇಲ ಅವರಿಗೆ ಹೂಮಾಲೆ ಹಾಕಿ ಸ್ವಾಗತಿಸಿಕೊಂಡರು. ಅಲ್ಲಿಂದ ಮೆರವಣಿಗೆ ಮೂಲಕ ಸೈನಿಕ ಮೈದಾನಕ್ಕೆ ಆಗಮಿಸಿ ಸ್ಮಾರಕದಲ್ಲಿ ದೇಶಭಕ್ತರ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಗಿಲ್ ಹುತಾತ್ಮ ಯೋಧ ದಾವಲಸಾಬ ಕಂಬಾರ ಪುತ್ಥಳಿಗೆ ಹೂಮಾಲೆ ಅರ್ಪಿಸಲಾಯಿತು.


ಉದಯವಾಹಿನಿ ಚಿತ್ರ

ಕಾರ್ಗಿಲ್ ಸಮಿತಿ ಅಧ್ಯಕ್ಷ ಮಹಾಂತೇಶ ಬೂದಿಹಾಳಮಠ, ಪ್ರಮುಖರಾದ ಸಂತೋಷ ಬಾದರಬಂಡಿ, ಶ್ರೀಕಾಂತ ಹಿರೇಮಠ, ಕಾರ್ಗಿಲ್ ಹುತಾತ್ಮ ಯೋಧ ದಾವಲಸಾಬ ಕಂಬಾರ ಅವರ ಸಹೋದರ ನಜೀರ್ ಕಂಬಾರ, ಮಾಜಿ ಸೈನಿಕರು, ಕಾರ್ಗಿಲ್ ಸಮಿತಿ ಸದಸ್ಯರು, ನಜೀರ್‌ಪಟೇಲ ಅವರ ತಂದೆ, ತಾಯಿ ಸೇರಿ ಹಲವರು ಇದ್ದರು. ಚಂದ್ರಶೇಖರ ಕಲಾಲ ಸ್ವಾಗತಿಸಿ ನಿರೂಪಿಸಿದರು. ಮಹಾಂತೇಶ ಬೂದಿಹಾಳಮಠ ವಂದಿಸಿದರು.

> ಸನ್ಮಾನ ಸ್ವೀಕರಿಸಿ ತಮ್ಮ ಸೇವಾವಧಿಯ ಅನುಭವ ಹಂಚಿಕೊಂಡು ದೇಶರಕ್ಷಣೆಯ ಜವಾಬ್ದಾರಿಯಲ್ಲಿ ನನಗೂ ಅವಕಾಶ ಸಿಕ್ಕಿದ್ದು ನನ್ನ ಜೀವನದ ಸಾರ್ಥಕ ಕ್ಷಣಗಳಲ್ಲಿ ಒಂದು. ನಿವೃತ್ತಿ ನಂತರವೂ ದೇಶಸೇವೆಗೆ ನನ್ನನ್ನು ಸಮಾಜಮುಖಿಯಾಗಿ ಅರ್ಪಿಸಿಕೊಳ್ಳುತ್ತೇನೆ
–ನಜೀರ್‌ಪಟೇಲ, ನಿವೃತ್ತ ಯೋಧ

ಸನ್ಮಾನದ ನಂತರ ನಜೀರಪಟೇಲ ಅವರನ್ನು ಅಂಬೇಡ್ಕರ್ ವೃತ್ತ ಮಾರ್ಗವಾಗಿ ಗುಡ್ನಾಳ ಗ್ರಾಮಕ್ಕೆ ಬೀಳ್ಕೊಡಲಾಯಿತು. ಮಾರ್ಗಮಧ್ಯೆ ಕುಂಟೋಜಿ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಎದುರಿಗೆ ಇರುವ ಮಾಜಿ ಸೈನಿಕನ ಸ್ಮಾರಕ ದಲ್ಲಿ ನಜೀರ್‌ಪಟೇಲ್ ಅವರು ಹೂಮಾಲೆ ಅರ್ಪಿಸಿ ಗೌರವ ನಮನ ಸಲ್ಲಿಸಿದರು. ಕುಂಟೋಜಿಯ ದೇಶಭಕ್ತರಿಂದಲೂ ನಜೀರ್‌ಪಟೇಲ ಅವರನ್ನು ಗೌರವಿಸಲಾಯಿತು.

> ಸೇನೆಯಲ್ಲಿ ವೀರಮರಣವನ್ನಪ್ಪಿ ಹುತಾತ್ಮರಾಗುವವರಿಗೆ, ಸೇವಾ ನಿವೃತ್ತರಿಗೆ ಗೌರವ ಸಲ್ಲಿಸಲೆಂದೇ ಕಾರ್ಗಿಲ್ ಸ್ಮಾರಕ ನಿರ್ಮಿಸಲಾಗಿದೆ. ಕಾರ್ಗಿಲ್ ಯುದ್ಧದಲ್ಲಿ ವೀರಮರಣವನ್ನಪ್ಪಿದ ಬಳವಾಟದ ಯೋಧ ದಾವಲಸಾಬ ಕಂಬಾರ ಅವರ ಸ್ಮರಣೆಯಲ್ಲಿ ನಿರ್ಮಿಸಲಾ ಗಿರುವ ಸ್ಮಾರಕ ಹಲವರನ್ನು ಗೌರವಿಸಿದ, ಹಲವು ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಸ್ಥಳವಾಗಿ ದೇಶದಭಕ್ತಿಯ ಸಂಕೇತವಾಗಿ ನಿಂತಿದೆ –ಬಸಯ್ಯ ನಂದಿಕೇಶ್ವರಮಠ

ಚಿತ್ತಾಪುರ ತಾಲ್ಲೂಕಿನಾದ್ಯಂತ ಬಿತ್ತನೆಗೆ ಸಿದ್ಧತೆ, ಕೆಲವೆಡೆ ಆರಂಭ

• ಉದಯವಾಹಿನಿ ಚಿತ್ತಾಪುರ

ಈ ಬಾರಿ ದಾಖಲೆಯ ಬಿಸಿಲು ಕಂಡ ತಾಲ್ಲೂಕಿನಲ್ಲಿ ಕೃತ್ತಿಕಾ ಮಳೆ ಬಂದು ಭೂಮಿ ತಂಪು ಮಾಡಿತು ನಂತರ ರೋಹಿಣಿ ಮಳೆ ಕೂಡ ಅಲ್ಲಲ್ಲಿ ಪೂರ್ಣಪ್ರಮಾಣದಲ್ಲಿ ಅಲ್ಲದಿದ್ದರೂ ಮಳೆ ಸುರಿಸಿ ತೇವಾಂಶ್ ಹೆಚ್ಚಿಸಿ ರೈತರ ಮೊಗದಲ್ಲಿ ಮಂದಹಾಸ ಮತ್ತು ಕೃಷಿ ಚಟುವಟಿಕೆ ಆರಂಭಿಸಲು ಹುಮ್ಮಸ್ಸು ತಂದು ಮೃಗಶಿರಾ ಮಳೆ ಸಾಕಷ್ಟು ಸುರಿಯುತ್ತಿದೆ ಇದರಿಂದ ರೈತರ ಸಂತಸ ಇಮ್ಮಡಿಗೊಂಡಿದೆ.

ತಾಲ್ಲೂಕಿನ ಚಿತ್ತಾಪುರ ಪಟ್ಟಣ ಸೇರಿದಂತೆ ಅಲ್ಲೂರು, ದಂಡಗುಂಡ, ಸಾತನೂರ ಇನ್ನಿತರ ಕಡೆ ಲಘುವಾಗಿ ಬಿತ್ತನೆ ಆರಂಭಗೊಂಡಿದೆ. ಇನ್ನು ಬಹುತೇಕ ಕಡೆ ಸಿದ್ಧತೆ ಮಾಡಿಕೊಂಡಿದ್ದಾರೆ.

2024–25 ನೇ ಮುಂಗಾರು ಹಂಗಾಮಿಗೆ ಪ್ರಸಕ್ತ ಸಾಲಿನಲ್ಲಿ ಚಿತ್ತಾಪುರ ತಾಲ್ಲೂಕಿನಲ್ಲಿ ಮುಂಗಾರು ಹಂಗಾಮಿಗೆ ಒಟ್ಟು 80877 ಹೆಕ್ಟೇರ್ ಬಿತ್ತನೆ ಗುರಿ ಹೊಂದಿದ್ದು ಅದರಲ್ಲಿ ಬೆಳೆತೊಗರಿ 59025 ಹೆಕ್ಟೇರ್, ಹೆಸರು 7500 ಹೆಕ್ಟೇರ್, ಉದ್ದು 3000 ಹೆಕ್ಟೇರ್, ಹತ್ತಿ 8824.ಹೆಕ್ಟೇರ್, ಇತರ ಬೆಳೆಗಳು 2528 ಹೆಕ್ಟೇರ್ ಒಟ್ಟು 80877 ಹೆಕ್ಟೇರ್.

ಉದಯವಾಹಿನಿ ಚಿತ್ರ

> ಕಳೆದ ಬಾರಿ ಮಳೆಯ ಕೊರತೆಯಿಂದ ಮುಂಗಾರು ಇಳುವರಿ ಕಡಿಮೆಯಾಗಿತ್ತು, ಹಿಂಗಾರು ಕೊನೆ ಕ್ಷಣ ಕೈ ಹಿಡಿಯಿತು. ಈ ಬಾರಿ ವರುಣದೇವ ಮನಸೋ ಇಚ್ಛೆ ಸುರಿಯುತ್ತಿದ್ದು ರೈತಾಪಿ ವರ್ಗದಲ್ಲಿ ಸಂತಸ ಮೂಡಿಸಿದೆ, ನಾವು ಬಿತ್ತನೆಗೆ ಅಣಿಯಾಗಿದ್ದೇವೆ.
–ಯಂಕಾರೆಡ್ಡಿ ಪಾಟೀಲ, ಪ್ರಗತಿಪರ ರೈತ, ಯರಗಲ್

ತಾಲ್ಲೂಕಿನಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರಕ್ಕೆ ಯಾವುದೇ ಕೊರತೆ ಇರುವುದಿಲ್ಲ. ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜಗಳಾದ ತೊಗರಿ, ಹೆಸರು, ಉದ್ದು, ಭತ್ತ ಹಾಗೂ ಸೋಯಾಬೀನ ಬಿತ್ತನೆ ಬೀಜಗಳು ಲಭ್ಯವಿರುತ್ತವೆ ಎಂದು ಕೃಷಿ ಸಹಾಯಕ ಕೃಷಿ ನಿರ್ದೇಶಕ ಸಂಜೀವಕುಮಾರ ಮಾನಕರ್ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ಎಲ್ಲಾ ರೈತರು ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಖರೀದಿಸುವಾಗ ಕಡ್ಡಾಯವಾಗಿ ರಸೀದಿ ಪಡೆದುಕೊಳ್ಳಬೇಕು. ರೈತರು ಬಿತ್ತನೆಗೆ ಮುಂಚಿತವಾಗಿ ಕಡ್ಡಾಯವಾಗಿ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ರೈತರು ಕಡ್ಡಾಯವಾಗಿ ಪರವಾನಿಗೆ ಹೊಂದಿದ ಅಧಿಕೃತ ಮಾರಾಟಗಾರರಿಂದ ಮಾತ್ರ ಕೃಷಿ ಪರಿಕರಗಳನ್ನು ಖರೀದಿಸಬೇಕು.
–ಸಂಜೀವಕುಮಾರ ಮಾನಕರ, ಸಹಾಯಕ ಕೃಷಿ ನಿರ್ದೇಶಕರು, ಚಿತ್ತಾಪುರ

ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮ

• ಉದಯವಾಹಿನಿ ಚಿತ್ತಾಪುರ

ಪಟ್ಟಣದ ಬಸವನಗರ , ರಾಮಮಂದಿರ , ಆಸರ್ ಮೊಹಲ್ಲಾ ಕಡೆ ಎಲ್ಲರನ್ನೂ ಆಕರ್ಷಿಸಿದ್ದು ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮ ನಿಮಿತ್ಯ ನಡೆದ ಶಾಲೆಗೆ ದಾಖಲಾದ ಮಕ್ಕಳನ್ನು ಸಿಂಗಾರಗೊಂಡ ಎತ್ತಿನ ಬಂಡಿಯಲ್ಲಿ ಕುಳ್ಳಿರಿಸಿ ನಡೆಸಿದ ಮೆರವಣಿಗೆ ಸಾರ್ವಜನಿಕರ ಗಮನ ಸೇಳೆಯಿತು.

ಮಕ್ಕಳನ್ನು ಮತ್ತು ಮುಖ್ಯ ಅತಿಥಿಗ ಳನ್ನು ಕುಳ್ಳಿರಿಸಿ ಹಲಗೆ ಮತ್ತು ಡ್ರಮ್ ಸೆಟ್ ವಾದ್ಯಗಳೊಂದಿಗೆ ದಾಖಲಾತಿಗೆ ಸಂಭ ಂದಿಸಿದ ಘೋಷಣೆಗಳ ಮೂಲಕ ನಡೆದ ವಿ ಶೇಷ ಆಂದೋಲನ ಜಾಥಾ ಸಾರ್ವಜನಿಕರ ಮೆಚ್ಚುಗೆ ಪಡೆಯಿತು. ವಾಹ್ ಎಂದು ಶಿಕ್ಷಕರ ಮಕ್ಕಳ ಕಾಳಜಿಗೆ ಅವರ ಭವಿಷ್ಯ ನಿರ್ಮಿಸಲು ನಾನಾ ವಿಧದಿಂದ ಪ್ರಯತ್ನಿಸುತ್ತಿರುವುದು ಖುಷಿಗೊಂಡು ಅವರ ಪ್ರಾಮಾಣಿಕ ಪ್ರಯತ್ನಕ್ಕೆ ಶರಣು ಎಂದರು. ಶಾಲೆಯ ಮುಖ್ಯಗುರು ದೇವಪ್ಪ ನಂದೂರಕರ್ ಮಾತನಾಡಿ ಶೈಕ್ಷ ಣಿಕ ಪ್ರಗತಿಯಿಂದ ಮಾತ್ರ ದೇಶ ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯ , ಪ್ರತಿಯೊಬ್ಬರೂ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒಟ್ಟು ನೀಡಬೇಕಿದೆ. ಶಿಕ್ಷಕರು ಮತ್ತು ಪಾಲಕರು ಪ್ರತಿಯೊಂದು ಮಗುವೂ ಶಾಲೆಗೆ ದಾಖಲಾಗುವಂತೆ ಜಾಗೃತಿ ವಹಿಸಬೇಕಿದೆ ಎಂದು ಹೇಳಿದರು. ಕಾಂಗ್ರೇಸ್ ಮುಖಂಡ ಮುಕ್ತಾರ ಪಟೇಲ್ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಿದರು, ಶಿಕ್ಷಕಿ ಲಲಿತಾದೇವಿ ಸಜ್ಜನಶೆಟ್ಟಿ, ವಿಜಯಲಕ್ಷ್ಮಿ ಅರ್ಚಕ, ಪ್ರಿಯಾಂಕಾ, ಎಲ್.ಎಲ್. ಎಫ್ ಸಂಸ್ಥೆಯ ಆರ್. ಪಿ. ಮಲ್ಲಮ್ಮ, ಎಸ್ ಡಿ ಎಮ್ ಸಿ ಅಧ್ಯಕ್ಷೆ ಈರಮ್ಮ ಹಲಗಿ, ಸದಸ್ಯರು, ಶಾಲಾ ಶಿಕ್ಷಕರು, ಪಾಲಕ ಪೋಷಕರು ಸೇರಿದಂತೆ ಹಳೆಯ ವಿಧ್ಯಾರ್ಥಿಗಳು , ಮಕ್ಕಳು ಭಾಗವಹಿಸಿದ್ದರು.

ಉದಯವಾಹಿನಿ ಚಿತ್ರ

ಯುವರಾಜ್ ಕುಮಾರ್ ವಿಚ್ಛೇದನ ವಿಚಾರ: ವಿಷಯ ಗೊತ್ತಿಲ್ದೆ ನಾನು ಏನೂ ಮಾತಾಡಲ್ಲ : ಶಿವರಾಜ್ ಕುಮಾರ್

• ಉದಯವಾಹಿನಿ ಶಿವಮೊಗ್ಗ

ದೊಡ್ಮನೆ ರಾಜಕುಮಾರ್ ಕುಟುಂಬದ ನಟ ಯುವರಾಜ್ ಕುಮಾರ್ ಅವರ ದಾಂಪತ್ಯದಲ್ಲಿ ಬಿರುಕು ಮೂಡಿದ್ದು ಈಗಾಗಲೇ ಅವರು ಸಲ್ಲಿಸುತ್ತಾರೆ ಈ ವಿಚಾರವಾಗಿ ಶಿವಮೊಗ್ಗದಲ್ಲಿ ನಟ ಶಿವರಾಜ್ ಕುಮಾರ್ ಪ್ರತಿಕ್ರಿಯೆ ನೀಡಿದ್ದು ನನಗೆ ಈ ವಿಚಾರವಾಗಿ ಯಾವುದೇ ವಿಷಯ ಗೊತ್ತಿಲ್ಲ. ಗೊತ್ತಿಲದೇ ನಾನು ಯಾವುದೇ ವಿಷಯವನ್ನು ಮಾತನಾಡುವುದಿಲ್ಲ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ಅದು ಅವರವರ ವೈಯಕ್ತಿಕ ವಿಚಾರ

ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಚಾರವಾಗಿ ಗೊತ್ತಿದ್ರೆ ಮಾತ್ರ ಮಾತಾಡಬೇಕು. ಗೊತ್ತಿಲ್ಲದೆ ನಾನು ಯಾವುದೇ ರೀತಿಯ ಪ್ರತಿಕ್ರಿಯೆ ನೀಡಲ್ಲ ಅದು ಅವರವರ ವೈಯಕ್ತಿಕ ವಿಚಾರ. ನಾನು ಮಾತಾಡೋದು ಸರಿಯಲ್ಲ, ಬೆಂಗಳೂರಿಗೆ ನಾನು ಹೋಗುತ್ತಿದ್ದೇನೆ ಏನಾಗುತ್ತದೆ ನೋಡೋಣ ಎಂದು ಶಿವಮೊಗ್ಗದಲ್ಲಿ ನಟ ಶಿವರಾಜ್ ಕುಮಾರ್ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ.

ಇನ್ನು ಇದೇ ವಿಚಾರವಾಗಿ ಗೀತಾ ಶಿವರಾಜಕುಮಾರ್ ಅವರು ಕೂಡ ಪ್ರತಿಕ್ರಿಯೆ ನೀಡಿದ್ದು, ಇದು ನಮ್ಮ ಮನೆಯ ಒಂದು ವಿಚಾರ ವೈಯಕ್ತಿಕ ವಿಚಾರವಾಗಿರುವುದರಿಂದ ಈ ವಿಚಾರವಾಗಿ ನಾನು ಯಾವುದೇ ಹೇಳಿಕೆಗಳನ್ನು ನೀಡಲು ಇಷ್ಟಪಡುವುದಿಲ್ಲ ಎಂದು ಗೀದಾ ಶಿವರಾಜ ಕುಮಾರ್ ಅವರು ಪ್ರತಿಕ್ರಿಯೆ ನೀಡಿದರು.

ರೈತರ ಬೇಡಿಕೆಗೆ ಅನುಗುಣವಾಗಿ ಬೀಜ, ರಸಗೊಬ್ಬರ ವಿತರಿಸಲು ಸೂಚನೆ

• ಉದಯವಾಹಿನಿ ಧಾರವಾಡ

ರೈತರ ಬೇಡಿಕೆಗೆ ಅನುಗುಣವಾಗಿ ಬೀಜ, ರಸ ಗೊಬ್ಬರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೃಷಿ ಹಾಗೂ ಇತರ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದ ಅವರು, ಮುಂಗಾರು ಪೂರ್ವ ಮಳೆ ಚನ್ನಾಗಿ ಆಗಿದ್ದರಿಂದ ಜಿಲ್ಲೆಯ ರೈತರು ಬಿತ

ಒಂದು ದೇಶ ಒಂದು ಚುನಾವಣೆ ಜಾರಿಗೆ ಬರುತ್ತಾ?

ಟ್ರೈಲರ್ ಮುಗೀತು, ಮೋದಿ 3.0 ಪಿಕ್ಚರ್ ಶುರು, ಹೇಗಿರುತ್ತೆ ಮುಂದಿನ ಐದು ವರ್ಷ?, ಜಾರಿಯಾಗುತ್ತಾ ಏಕರೂಪ ನಾಗರಿಕ ಸಂಹಿತೆ?

ಏಕರೂಪ ನಾಗರಿಕ ಸಂಹಿತೆ

ಹೊಸದಿಲ್ಲಿ: ಬರೋಬ್ಬರಿ ಮೂರು ತಿಂಗಳ ಭಾರತದ ಚುನಾವಣಾ ಪ್ರಕ್ರಿಯೆಗೆ ಅಧಿಕೃತ ತೆರೆ ಬಿದ್ದಿದೆ. ಹ್ಯಾಟ್ರಿಕ್ ಗೆಲುವು ಸಾಧಿಸಿರುವ ನರೇಂದ್ರ ಮೋದಿ ದಾಖಲೆಯ ಮೂರನೇ ಬಾರಿಗೆ ದೇಶದ ಪ್ರಧಾನಿ ಯಾಗಿ ಪದಗ್ರಹಣ ಮಾಡಿದ್ದಾರೆ. ಇದರ ಜೊತೆ ಭಾಗಶಃ ಪೂರ್ಣ ಪ್ರಮಾಣದ ಮಂತ್ರಿ ಮಂಡಲ ಕೂಡ ಅಸ್ತಿತ್ವಕ್ಕೆ ಬಂದಿದೆ. ಇದರೊಂದಿಗೆ ಟ್ರೈಲರ್ ಮುಗಿದಿದ್ದು, ಮೋದಿ ಟೀಂನ ಪಿಕ್ಚರ್ ಶುರು ವಾಗಿದೆ. ಮುಂದಿನ ಐದು ವರ್ಷದ ಮೋದಿ 3.0 ಸಿನಿಮಾ ಹೇಗಿರಲಿದೆ ಈ ಸಿನಿಮಾ ಜನರಿಗೆ ಬೋರ್ ಹೊಡೆಸುತ್ತಾ? ಜನರ ಮನ ಗೆಲ್ಲುತ್ತಾ? ಟ್ವಿಸ್ಟ್ ಗಳು ಏನಾದ್ರೂ ಇರ್ತಾವಾ? ಇಂಟ್ರವಲ್ ಹೇಗಿರುತ್ತೆ ಎಂಬ ಪ್ರಶ್ನೆಗಳು ಎಲ್ಲರಲ್ಲೂ ಇವೆ.

ಈ ಸಲದ ಲೋಕಸಭಾ ಚುನಾವಣೆ ಪ್ರಚಾರದ ವೇಳೆ ನರೇಂದ್ರ ಮೋದಿ ಸೇರಿ ಬಿಜೆಪಿಯ ನಾಯಕರು ಪದೇ ಪದೇ ಹೇಳಿದ್ದು ಒಂದೇ ಮಾತು. ಕಳೆದ 10 ವರ್ಷ ನೀವು ನೋಡಿರೋದು ಬರೀ ಟ್ರೈಲರ್ ಅಷ್ಟೇ. ಅಭೀ ಪಿಕ್ಚರ್ ಬಾಕಿ ಹೈ ಅಂತಾ ಎಲ್ಲರೂ ಹೇಳಿದ್ದರು. ಅದರಂತೆ ಈಗ ಮತ್ತೊಮ್ಮೆ ಮೋದಿ ಸರ್ಕಾರ ದೇಶದಲ್ಲಿ ಅಧಿಕಾರಕ್ಕೆ ಬಂದಿದ್ದು, ಮುಂದೆ ಪಿಕ್ಚರ್ ಹೇಗಿರುತ್ತೆ ಎಂಬ ನಿರೀಕ್ಷೆ ಸಹಜವಾಗಿಯೇ ಜನರಲ್ಲಿ ಮನೆ ಮಾಡಿದೆ. ಈಗಾಗಲೇ 2047ಕ್ಕೆ ವಿಕಸಿತ ಭಾರತದ ಪರಿಕಲ್ಪನೆಯನ್ನು ಘೋಷಿಸಿರೋ ಮೋದಿ ಅದರಂತೆ ಕೆಲಸ ಮಾಡಬೇಕಿದೆ.. 2047ಕ್ಕಾಗಿ 24 x 7 ಕೆಲಸ ಎಂದು ಮೋದಿ ಘೋಷಿಸಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಮಂತ್ರವನ್ನು ಪಠಿಸಬೇಕಿದೆ. ದೇಶದ ಜಿಡಿಪಿಯನ್ನು ಹೆಚ್ಚಿಸಬೇಕಿದೆ. ಈಗ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿರುವ ಭಾರತವನ್ನು ಅಮೆರಿಕ ಹಾಗೂ ಚೀನಾದ ಬಳಿಕ ಮೂರನೇ ಸ್ಥಾನಕ್ಕೆ ತಂದು ನಿಲ್ಲಿಸುವ ದೊಡ್ಡ ಗುರಿ ಮೋದಿ ಮುಂದೆ ಇದೆ.



ಮುಂದಿನ ಐದು ವರ್ಷ ಹೇಗಿರಲಿದೆ ಎಂಬ ಚರ್ಚೆ ಶುರು

ನರೇಂದ್ರ ಮೋದಿ ಮತ್ತೊಂದು ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದರ ಬೆನ್ನಲ್ಲೇ ಮುಂದಿನ ಐದು ವರ್ಷ ಹೇಗಿರಲಿದೆ ಎಂಬ ಚರ್ಚೆಗಳು ಶುರುವಾಗಿವೆ. ಅವರೇ ಹೇಳಿದಂತೆ ಕಳೆದ ಎರಡು ಅವಧಿ ಟ್ರೈಲರ್ ಆಗಿದ್ದು, ಇಲ್ಲಿಂದ ಅಸಲಿ ಸಿನಿಮಾ ಶುರು ಆಗಲಿದೆ ಎಂದಿದ್ದರು. ಈಗ ಅದರಂತೆ ಮೋದಿ 3.0 ಸಿನಿಮಾ ಲೈವ್ ಆಗಿದ್ದು, ಭಾಗಶಃ ಪೂರ್ಣ ಪ್ರಮಾಣದ ಸಚಿವ ಸಂಪುಟ ಕೂಡ ಅಸ್ತಿತ್ವಕ್ಕೆ ಬಂದಿದೆ. ಈಗ ಮುಂದಿನ ಐದು ವರ್ಷದಲ್ಲಿ ಹಲವು ಪ್ರಮುಖ ಗುರಿಗಳನ್ನು ಮೋದಿ ಸರ್ಕಾರ ಇಟ್ಟುಕೊಂಡಿದ್ದು, ಮಿತ್ರಪಕ್ಷಗಳನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಾ ಅವುಗಳನ್ನು ಸಾಧಿಸುವ ಅನಿವಾರ್ಯತೆ ಇದೆ.

ಜಾರಿಯಾಗುತ್ತಾ ಏಕರೂಪ ನಾಗರೀಕಸಂಹಿತೆ?: ಇನ್ನು, ಬಿಜೆಪಿಯ ಮೂರು ಪ್ರಮುಖ ಘೋಷಣೆಗಳಲ್ಲಿ ರಾಮ ಮಂದಿರ ನಿರ್ಮಾಣ ಹಾಗೂ 370ನೇ ವಿಧಿ ರದ್ದತಿ ಈಗಾಗಲೇ ಈಡೇರಿವೆ. ಇನ್ನೊಂದು ಪ್ರಮುಖ ಘೋಷಣೆಯಾಗಿರುವ ಏಕರೂಪ ನಾಗರೀಕ ಸಂಹಿತೆಯನ್ನು ಜಾರಿಗೆ ತರಲು ಬಿಜೆಪಿಗೆ ಇನ್ನು ಆಗಿಲ್ಲ. ಅದನ್ನು ಈ ಅವಧಿಯಲ್ಲಿ ಜಾರಿಗೆ ತರುವ ಸವಾಲು ಬಿಜೆಪಿ ಮುಂದಿದೆ.

ಆದರೆ, ಈ ಬಾರಿ ಮಿತ್ರಪಕ್ಷಗಳ ಮರ್ಜಿಗೆ ಕಮಲ ಪಡೆ ಬಿದ್ದಿರುವುದರಿಂದ ಏಕರೂಪ ನಾಗರೀಕ ಸಂಹಿತೆ ಇದೇ ಅವಧಿಯಲ್ಲಿ ಜಾರಿಯಾಗುತ್ತಾ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಈಗಾಗಲೇ ಸಿಎಎ ದೇಶದಲ್ಲಿ ಜಾರಿಗೆ ಬಂದಿದ್ದು, ಎನ್‌ಆರ್‌ಸಿಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಮೋದಿ ಮೇಲಿದೆ.

ಒಂದು ದೇಶ, ಒಂದು ಎಲೆಕ್ಷನ್ ಕಲ್ಪನೆ ರಿಯಾಲಿಟಿಗೆ ಬರುತ್ತಾ?: ಮುಂಬೈ ಹಾಗೂ ಅಹಮದಾಬಾದ್ ನಡುವೆ ಈಗಾಗಲೇ ನಡೆಯುತ್ತಿರುವ ಬುಲೆಟ್ ಟ್ರೈನ್ ಕಾಮಗಾರಿಗೆ ವೇಗ ನೀಡಬೇಕಿದೆ. ಇದರ ಜೊತೆ ಉತ್ತರ ಮತ್ತು ದಕ್ಷಿಣ ಮತ್ತು ಪೂರ್ವ ಭಾರತವನ್ನು ಬೆಸೆಯುವ ಬುಲೆಟ್ ರೈಲು ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಸವಾಲಿದೆ. ಅದಲ್ಲದೇ ಒಂದು ದೇಶ, ಒಂದು ಚುನಾವಣೆ ಬಿಜೆಪಿಯ ಪ್ರಮುಖ ಕನಸಾಗಿದ್ದು, ಅದನ್ನು ವಾಸ್ತವಕ್ಕೆ ತರುವ ಪ್ರಯತ್ನವನ್ನು ಬಿಜೆಪಿ ಮಾಡುವ ಸಾಧ್ಯತೆ ಇದೆ. ದೇಶದ ಮೊದಲ ಮಾನವಸಹಿತ ಬಾಹ್ಯಾಕಾಶ ಯೋಜನೆ ಗಗನಯಾನವನ್ನು ಈಗಾಗಲೇ ಘೋಷಿಸಿದ್ದು, ಅದನ್ನು ಕೂಡ ಯಶಸ್ಸಿನ ಕಡೆ ಮೋದಿ ಸರ್ಕಾರ ತೆಗೆದುಕೊಂಡು ಹೋಗಬೇಕಿದೆ.

ಇದಷ್ಟೇ ಅಲ್ಲದೇ ದೇಶದ ಸಾರಿಗೆ ಮೂಲ ಸೌಕರ್ಯವನ್ನು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗುವ ವಾಗ್ದಾನವನ್ನು ಮೋದಿ ನೀಡಿದ್ದರು. ಅಂದ್ರೇ ರೈಲ್ವೇ ನಿಲ್ದಾಣ, ವಿಮಾನ ನಿಲ್ದಾಣಗಳನ್ನು ಮತ್ತಷ್ಟು ಆತ್ಯಾಧುನಿಕಗೊಳಿಸಬೇಕಿದೆ. ಜೊತೆಗೆ ಹೊಸ ವಿಮಾನ ನಿಲ್ದಾಣಗಳನ್ನು, ರೈಲ್ವೇ ಸೌಕರ್ಯವನ್ನು ಮೇಲ್ದರ್ಜೆಗೇರಿಸಬೇಕಿದೆ. ರೈತರಿಗಾಗಿ ಅನೇಕ ಕೆಲಸಗಳನ್ನು ಮಾಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಬಿಜೆಪಿ ಘೋಷಿಸಿತ್ತು. ಈಗ ಅವುಗಳನ್ನೆಲ್ಲಾ ಈಡೇರಿಸಿ, ಜನರು, ಅನ್ನದಾತರು ನಂಬಿಕೆ ಉಳಿಸಿಕೊಳ್ಳಬೇಕಿದೆ.

ಮೋದಿ ಆಡಳಿತ ಆರ್ಥಿಕ ಸ್ಥಿರತೆ ನೀಡಲಿದೆ; ಅತುಲ್ ಕೇಶಪ್

ವಾಷಿಂಗ್ಟನ್: ಐತಿಹಾಸಿಕ ಮೂರನೇ ಅವಧಿಗೆ ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವುದು ಹೆಚ್ಚುತ್ತಿರುವ ಭೂತಂತ್ರದ ಅನಿಶ್ಚಿತತೆಯ ನಡುವೆ ರಾಜಕೀಯ ಮತ್ತು ಆರ್ಥಿಕ ಸ್ಥಿರತೆಯ ಬಲವಾದ ಸಂದೇಶವನ್ನು ಕಳುಹಿಸುತ್ತದೆ ಎಂದು ಯುಎಸ್‌ಐಬಿಸಿ ಅಧ್ಯಕ್ಷ ಅತುಲ್ ಕೇಶಪ್ ಹೇಳಿದ್ದಾರೆ. ಭಾರತೀಯ ಜನತಾ ಪಾರ್ಟಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತಕ ಮೈತ್ರಿಕೂಟ (ಎನ್‌ಡಿಎ) ಸರ್ಕಾರದಲ್ಲಿ 72 ಸದಸ್ಯರ ಕೇಂದ್ರ ಸಚಿವ ಸಂಪುಟದ ನೇತತ್ವದ ದಾಖಲೆ ಸಮನಾದ ಮೂರನೇ ಅವಧಿಗೆ ಮೋದಿ ಭಾನುವಾರ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಪ್ರಧಾನಿ ಮೋದಿಯವರ ಐತಿಹಾಸಿಕ ಮೂರನೇ ಅವಧಿಯು ಹೆಚ್ಚುತ್ತಿರುವ ಭೂತಂತ್ರದ ಅನಿಶ್ಚಿತತೆಯ ನಡುವೆ ಭಾರತದ ಮತದಾರರಿಂದ ರಾಜಕೀಯ ಮತ್ತು ಆರ್ಥಿಕ ಸ್ಥಿರತೆ, ನಿರಂತರತೆಯ ಬಲವಾದ ಸಂದೇಶವನ್ನು ಕಳುಹಿಸುತ್ತದೆ ಎಂದು ಯುಎಸ್ ಇಂಡಿಯಾ ಬಿಸಿನೆಸ್ ಕೌನ್ಸಿಲ್ ಅಧ್ಯಕ್ಷ ಕೇಶಪ್ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಭಾರತವನ್ನು ಪ್ರಜಾಪ್ರಭುತ್ವ, ಸಮೃದ್ಧಿ ಮತ್ತು ತಾಂತ್ರಿಕ ಆವಿಷ್ಕಾರದ ಪ್ರಮುಖ ಆಂಕರ್ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಪ್ರಮುಖ ಪಾಲುದಾರರನ್ನಾಗಿ ಮಾಡುವ ಪ್ರಗತಿ ಪರ ನೀತಿಗಳ ಮುಂದುವರಿಕೆಯನ್ನು ಭಾರತೀಯ ಮತದಾರರು ಅನುಮೋದಿಸಿದ್ದಾರೆ ಎಂದು ಮೋದಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಕೇಶಪ್ ಹೇಳಿದರು.

ವರ್ಷಗಳ ಸಮರ್ಪಿತ ಪ್ರಯತ್ನ ಮತ್ತು ಹೂಡಿಕೆಯ ಮೂಲಕ ಮುನ್ನುಗ್ಗಿದ ಅಮೆರಿಕ-ಭಾರತ ಸಂಬಂಧಗಳು ತಮ ಮೇಲುಖ ಪಥದಲ್ಲಿ ಮುಂದುವರಿಯುತ್ತವೆ. ವಾಷಿಂಗ್ಟನ್ ಅಥವಾ ನವದೆಹಲಿಯಲ್ಲಿನ ರಾಜಕೀಯ ಬದಲಾವಣೆಗಳನ್ನು ಲೆಕ್ಕಿಸದೆ ಎರಡೂ ದೇಶಗಳಲ್ಲಿ ಈ ಸಂಬಂಧಕ್ಕೆ ಬಲವಾದ ಉಭಯಪಕ್ಷೀಯ ಬೆಂಬಲವು ಅದರ ಸ್ಥಿತಿಸ್ಥಾಪಕತ್ವವನ್ನು ಖಚಿತಪಡಿಸುತ್ತದೆ ಎಂದು ಅವರು ಹೇಳಿದರು. ಪ್ರತ್ಯೇಕ ಹೇಳಿಕೆಯಲ್ಲಿ, ಫೌಂಡೇಶನ್ ಫಾರ್ ಇಂಡಿಯಾ ಮತ್ತು ಇಂಡಿಯನ್ ಡಯಾಸ್ಪೊರಾ ಸ್ಟಡೀಸ್ (ಎಫ್‌ಐಐಡಿಎಸ್) ಮೋದಿಯವರ ಮೂರನೇ ಅವಧಿಯಲ್ಲಿ, ಜಾಗತಿಕ ಪೂರ್ವ ಮತ್ತು ಜಾಗತಿಕ ದಕ್ಷಿಣ ಎರಡನ್ನೂ ಪರಿಣಾಮಕಾರಿಯಾಗಿ ಮುನ್ನಡೆಸುವ ಮೂರನೇ ಅತಿದೊಡ್ಡ ಆರ್ಥಿಕತೆ ಮತ್ತು ಪ್ರಭಾವಿ ಜಾಗತಿಕ ಶಕ್ತಿಯಾಗುವತ್ತ ಭಾರತದ ಪ್ರಯಾಣವನ್ನು ಅವರು ಕುತೂಹಲದಿಂದ ನಿರೀಕ್ಷಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

> **ಎರಡೂ ರಾಷ್ಟ್ರಗಳು ಮಾನವ ಸಹಕಾರದ ವಾಸ್ತವಿಕವಾಗಿ ಪ್ರತಿಯೊಂದು ಕಲ್ಪಿಸಬಹುದಾದ ಕ್ಷೇತ್ರವನ್ನು ವ್ಯಾಪಿಸಿರುವ ಪಾಲುದಾರಿಕೆಯನ್ನು ನಿಖರವಾಗಿ ರೂಪಿಸಿವೆ, ಬೆಳೆಸಿವೆ, ಬಲಪಡಿಸಿವೆ, ಇದು ಪರಸ್ಪರ ಬೆಳವಣಿಗೆ ಮತ್ತು ಸಮೃದ್ಧಿಗೆ ಆಳವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ**
> -ಅತುಲ್ ಕೇಶಪ್
> ಯುಎಸ್‌ಐಬಿಸಿ ಅಧ್ಯಕ್ಷ

13 ವಿಧಾನಸಭಾ ಕ್ಷೇತ್ರಗಳ ಉ.ಚು.ಗೆ ದಿನಾಂಕ ಘೋಷಣೆ

ನವದೆಹಲಿ: ಏಳು ರಾಜ್ಯಗಳ 13 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ದಿನಾಂಕವನ್ನು ಘೋಷಣೆ ಮಾಡಿದ್ದು, ಜು. 10ರಂದು ಮತದಾನ ನಡೆದು ಜುಲೈ 13ರಂದು ಫಲಿತಾಂಶ ಪ್ರಕಟವಾಗಲಿದೆ. ವಿವಿಧ ಕಾರಣಗಳಿಂದಾಗಿ ತೆರವಾಗಿದ್ದ ಒಟ್ಟು 13 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಜೂ.14ರಂದು ಅಧಿಸೂಚನೆ ಹೊರಡಲಿದ್ದು, ಜೂ.21ರಂದು ನಾಮ ಪತ್ರ ಸಲ್ಲಿಸಲು ಕಡೆಯ ದಿನವಾಗಿದೆ.

ಜೂ.24 ನಾಮಪತ್ರ ಪರಿಶೀಲನೆ ನಡೆಯಲಿದ್ದು, ಜೂ.26 ನಾಮಪತ್ರ ಹಿಂಪಡೆಯಲು ಕಡೆಯ ದಿನವಾಗಿದೆ. ಜುಲೈ 10ರಂದು ಮತದಾನ ನಡೆದು 13ರಂದು ಮತ ಎಣಿಕೆ ನಡೆದು ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ. ಬಿಹಾರದಲ್ಲಿ ಭೀಮಾ ಭಾರತಿ ಅವರ ರಾಜೀನಾಮೆ ತೆರವಾಗಿದ್ದ ರೂಪೌಲಿ, ಪಶ್ಚಿಮ ಬಂಗಾಳದ ಕೃಷ್ಣಕಲ್ಯಾಣಿ ಅವರಿಂದ ತೆರವಾಗಿದ್ದ ರಾಯ್‌ಗಂಜ್, ಡಾ.ಮುಕುಟ್‌ಮಣಿ ಅಧಿಕಾರಿ ಅವರ ರಾಜೀನಾಮೆಯಿಂದ ತೆರವಾಗಿದ್ದ ರಂಗಟ್ ದಕ್ಷಿಣ್, ಸಾದನ್‌ಪಾಂಡೆ ಅವರ ನಿಧನದಿಂದ ತೆರವಾಗಿದ್ದ ಮಣಿಕ್ ತಳ, ಬಿಸ್ವಾಜಿತ್ ದಾಸ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಬಾಗಡ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಇನ್ನು ತಮಿಳುನಾಡಿನಲ್ಲಿ ಶಾಸಕ ತಿರು.ಎನ್. ಪುಗಳೇಂದಿ ನಿಧನದಿಂದ ತೆರವಾಗಿರುವ ವಿಕ್ರವಾಂಡಿ, ಮಧ್ಯಪ್ರದೇಶದಲ್ಲಿ ಕಮಲೇಶ್ ಪ್ರತಾಪ್ ಶಾಕ್ ಅವರ ರಾಜೀನಾಮೆಯಿಂದ ತೆರವಾಗಿರುವ ಅಮರವಾರ, ಉತ್ತರಖಂಡ್‌ನಲ್ಲಿ ಶಾಸಕ ರಾಜೇಂದ್ರಸಿಂಗ್ ಭಂಡಾರಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಬದ್ರಿನಾಥ್ ಹಾಗೂ ಶಾಸಕ ಸರ್ವತ್ ಕರೀಂ ಅನ್ಸಾರಿ ನಿಧನದಿಂದ ತೆರವಾಗಿದ್ದ ಮಂಗಿಯಾರ್, ಪಂಜಾಬ್‌ನ ಶೀತಲ್, ಅಂಗುರಲ್ ರಾಜೀನಾಮೆಯಿಂದ ಜಲದಂರ್ ಪಶ್ಚಿಮ ಹಾಗೂ ಹಿಮಾಚಲಪ್ರದೇಶದಲ್ಲಿ ಶಾಸಕರಾಗಿದ್ದ ಹೋಶಿಯಾರ್ ಸಿಂಗ್, ಅಶೀಸ್ ಶರ್ಮ ರಾಜೀನಾಮೆಯಿಂದ ತೆರವಾಗಿದ್ದ ಅಮೀರ್‌ಪುರ್‌ಗೆ ಉಪಚುನಾವಣೆ ನಡೆಯಲಿದೆ.

ಆರ್‌ಎಸ್‌ಎಸ್ ಸದಸ್ಯನ ವಿರುದ್ಧ 10 ಕೋಟಿ ಮೊಕದ್ದಮೆ ದಾಖಲಿಸಿದ ಬಿಜೆಪಿ ನಾಯಕ

ನವದೆಹಲಿ: ತಮ್ಮ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡಿರುವ ಆರ್‌ಎಸ್‌ಎಸ್ ಸದಸ್ಯ ಶಾಂತನು ಸಿನ್ಹಾವಿರುದ್ಧ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ, 10 ಕೋಟಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ 'ಸುಳ್ಳು ಹಾಗೂ ಅವಹೇಳನಕಾರಿ' ಪೋಸ್ಟ್ ಅನ್ನು ತೆಗೆದುಹಾಕಬೇಕು ಎಂದು ಸಿನ್ಹಾ ಅವರಿಗೆ ನೋಟಿಸ್ ಕಳುಹಿಸಿದ್ದಾರೆ. 'ನನ್ನ ವಿರುದ್ಧ ಮಾಡಲಾಗಿರುವ ಆರೋಪವು ಅತ್ಯಂತ ಅಪಮಾನಕರವಾಗಿದೆ. ನಾನು ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದೇನೆ ಎಂಬುದು ಸುಳ್ಳು. ಸಾರ್ವಜನಿಕ ವ್ಯಕ್ತಿತ್ವವುಳ್ಳ ಆ ಮಹಿಳೆಯ ಘನತೆಗೂ ಈ ಆರೋಪರಿಂದ ಧಕ್ಕೆಯಾಗಿದೆ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಮಾಳವೀಯ ಅವರು ಪಶ್ಚಿಮ ಬಂಗಾಳದಲ್ಲಿ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಸಿನ್ಹಾ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿದ್ದರು. ಈ ಆರೋಪದ ಬೆನ್ನಲ್ಲೇ ಮಾಳವೀಯ ವಿರುದ್ಧ ಗುಡುಗಿರುವ ಕಾಂಗ್ರೇಸ್, ಕಠಿಣ ಕ್ರಮಕ್ಕೆ ಒತ್ತಾಯಿಸಿದೆ. ಪತ್ರಿಕಾಗೋಷ್ಠಿ ನಡೆಸಿರುವ ಕಾಂಗ್ರೇಸ್ ನಾಯಕಿ ಸುಪ್ರಿಯಾ ಶ್ರೀನೆತ್, 'ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ನೀಚ ಕೃತ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

ಪಂಚತಾರಾ ಹೋಟೆಲ್‌ಗಳಲ್ಲಿ ಮಾತ್ರವಲ್ಲ, ಪಶ್ಚಿಮ ಬಂಗಾಳದ ಬಿಜೆಪಿ ಕಚೇರಿಯಲ್ಲಿಯೂ ಮಹಿಳೆ ಮೇಲೆ ದೌರ್ಜನ್ಯವೆಸಗಿದ್ದಾರೆ ಎಂದು ಆರ್‌ಎಸ್‌ಎಸ್ ಸದಸ್ಯ ಶಾಂತನು ಸಿನ್ಹಾ ಆರೋಪಿಸಿದ್ದಾರೆ' ಎಂದು ಹೇಳಿದ್ದಾರೆ.

ಮುಂದುವರಿದು, ಮಾಳವೀಯ ನೀಚ ಕೃತ್ಯಗಳಲ್ಲಿ ತೊಡಗಿಕೊಂಡಿದ್ದಾರೆ ಎಂದು ಬಿಜೆಪಿ ನಾಯಕ ರಾಹುಲ್ ಸಿನ್ಹಾ ಅವರ ಸಂಬಂಧಿ ಆರ್‌ಎಸ್‌ಎಸ್‌ನ ಶಾಂತನು ಸಿನ್ಹಾ ಆರೋಪಿಸಿದ್ದಾರೆ.

ಮೋದಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿ 24 ಗಂಟೆ ಕಳೆಯುವುದರೊಳಗೆ, ಇಂತಹ ಗಂಭೀರ ಆರೋಪ ಕೇಳಿಬಂದಿರುವುದು ಆಘಾತಕಾರಿ. ಮಾಳವೀಯ ಅವರನ್ನು ಕೂಡಲೇ ಪಕ್ಷದ ಅಧಿಕಾರದಿಂದ ಕಿತ್ತುಹಾಕಬೇಕು. ಆರೋಪದ ಸಂಬಂಧ ಸ್ವತಂತ್ರ ತನಿಖೆ ನಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

ಪ್ರಧಾನಿಯಾಗಿ 3ನೇ ಇನ್ನಿಂಗ್ಸ್ ಆರಂಭಿಸಿದ ಮೋದಿ: ಶೆಹಬಾಜ್ ಶುಭಾಶಯ

ಇಸ್ಲಾಮಾಬಾದ್: ನರೇಂದ್ರ ಮೋದಿ ಅವರು ಭಾರತದ ಪ್ರಧಾನಿಯಾಗಿ ತಮ್ಮ ಸತತ ಮೂರನೇ ಇನ್ನಿಂಗ್ಸ್ ಅನ್ನು ಆರಂಭಿಸಿದ್ದಾರೆ. ಇದೇ ವೇಳೆ ನರೇಂದ್ರ ಮೋದಿ ಅವರಿಗೆ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಶುಭಾಶಯಗಳನ್ನು ಕೋರಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನರೇಂದ್ರ ಮೋದಿ ಅವರಿಗೆ ಅಭಿನಂದನೆಗಳು' ಎಂದು ಬರೆದುಕೊಂಡಿದ್ದಾರೆ. ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಆದರೆ, ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ನೆರೆಯ ರಾಷ್ಟ್ರ ಪಾಕಿಸ್ತಾನವನ್ನು ಹೊರತುಪಡಿಸಿ ಬಾಂಗ್ಲಾದೇಶ, ನೇಪಾಳ, ಭೂತಾನ್, ಶ್ರೀಲಂಕಾ, ಮಾಲ್ಡೀಕ್ಸ್‌ನ ನಾಯಕರಿಗೆ ಆಹ್ವಾನ ನೀಡಲಾಗಿತ್ತು. ಸಮಾರಂಭಕ್ಕೆ ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು, ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ', ಶ್ರೀಲಂಕಾ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ, ಮಾರಿಷಸ್ ಪ್ರಧಾನಿ ಪ್ರವಿಂದ್ ಕುಮಾರ್ ಜಗನ್ನಾಥ್, ಭೂತಾನ್ ಪ್ರಧಾನಿ ಶೆರಿಂಗ್ ತೊಬ್ಗೆ, ಬಾಂಗ್ಲಾದೇಶದ ಅಧ್ಯಕ್ಷೆ ಶೇಖ್ ಹಸೀನಾ, ಸೆಷೆಲ್ಸ್ ಉಪಾಧ್ಯಕ್ಷ ಅಹಮದ್ ಅಫಿಫ್ ಅವರೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗುತ್ತಿರುವ ಬಗ್ಗೆ ಈಚೆಗೆ ಪ್ರತಿಕ್ರಿಯಿಸಿದ್ದ ಪಾಕಿಸ್ತಾನ, ಮಾತುಕತ

ಬುಲ್ಡೋಝರ್ ಮೇಲೆ, ದುಬೈ ಬೀದಿಗಳಲ್ಲಿ ಹೇಗಿತ್ತು ನೋಡಿ ಭಾರತೀಯರ ಸಂಭ್ರಮ

ಟಿ20 ವಿಶ್ವಕಪ್‌ನ 19ನೇ ಪಂದ್ಯದಲ್ಲಿ ರೋಚಕ ಜಯ ಸಾಧಿಸುವ ಮೂಲಕ ಟೀಮ್ ಇಂಡಿಯಾ ಸೂಪರ್8 ಹಂತಕ್ಕೇರುವುದನ್ನು ಬಹುತೇಕ ಖಚಿತಪಡಿಸಿಕೊಂಡಿದೆ. ಮುಂದಿನ ಪಂದ್ಯಗಳಲ್ಲಿ ಯುಎಸ್‌ಎ ಅಥವಾ ಕೆನಡಾ ವಿರುದ್ಧ ಜಯಗಳಿಸಿದರೆ ಭಾರತ ತಂಡ ಸೂಪರ್8 ಹಂತಕ್ಕೇರಲಿದೆ. ಅದೇ ಟೀಮ್ ಇಂಡಿಯಾ ವಿರುದ್ಧ ಸೋತಿರುವ ಪಾಕಿಸ್ತಾನ್ ತಂಡ ಮುಂದಿನ 2 ಪಂದ್ಯಗಳಲ್ಲೂ ಜಯಗಳಿಸಬೇಕು. ಅಲ್ಲದೆ ಯುಎಸ್‌ಎ ತಂಡದ ಫಲಿತಾಂಶವನ್ನು ಎದುರು ನೋಡಬೇಕಿದೆ.

ಈ ರೋಚಕ ಗೆಲುವಿನ ಬೆನ್ನಲ್ಲೇ ಭಾರತೀಯ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿತು. ಪಂದ್ಯ ನಡೆದ ನ್ಯೂಯಾರ್ಕ್ ಸ್ಟೇಡಿಯಂನ ಹೊರಗೆ ಅಭಿಮಾನಿಗಳು ಬ್ಯಾಂಡ್ ಬಜಾಯಿಸುವ ಮೂಲಕ ಕುಣಿದು ಕುಪ್ಪಳಿಸಿದರು. ಅತ್ತ ದೂರದ ದುಬೈನಲ್ಲಿ ಅಭಿಮಾನಿಗಳು ಬೀದಿಗಿಳಿದು ಸಂಭ್ರಮಿಸಿದರು.

ಇನ್ನು ಇಂದೋರ್‌ನಲ್ಲಿ ಅಭಿಮಾನಿಗಳು ಧ್ವಜಗಳೊಂದಿಗೆ ರಸ್ತೆಗಿಳಿದು ಹರ್ಷೋದ್ಗಾರದೊಂದಿಗೆ ಕುಣಿದು ಕುಪ್ಪಳಿಸಿದರು.

ಪುಣೆಯ ಅಭಿಮಾನಿಗಳು ಒಂದೆಜ್ಜೆ ಮುಂದೆ ಹೋಗಿ ಬುಲ್ಡೋಝರ್ ಮೇಲೆ ನಿಂತು ಜಯಕಾರ ಹಾಕುತ್ತಾ ಸಂಭ್ರಮಿಸಿದರು. ಈ ಭರ್ಜರಿ ಸಂಭ್ರಮಗಳ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಎಲ್ಲಾರಿಂದಲೂ ಭಾರೀ ಮೆಚ್ಚುಗೆಗಳು ವ್ಯಕ್ತವಾಗುತ್ತಿದೆ.

ಟೀಂ ಇಂಡಿಯಾ ಗೆಲುವಿಗೆ ಜಯ್ ಶಾ ಸಂಭ್ರಮ

ನ್ಯೂಯಾರ್ಕ್‌ನಲ್ಲಿ ನಡೆದ ಟಿ20 ವಿಶ್ವಕಪ್ 19ನೇ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 6 ರನ್‌ಗಳಿಂದ ಮಣಿಸಿದ ಟೀಂ ಇಂಡಿಯಾ ಐಸಿಸಿ ಟೂರ್ನಿಗಳಲ್ಲಿ ಪಾಕ್ ವಿರುದ್ಧ ತನ್ನ ಪಾರುಪತ್ಯವನ್ನು ಮುಂದುವರೆಸಿದೆ. ಬದ್ಧವೈರಿಯ ವಿರುದ್ಧದ ಈ ಜಯವನ್ನು ಇಡೀ ಭಾರತದಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಇದಲ್ಲದೇ ಟೀಂ ಇಂಡಿಯಾದ ಈ ಗೆಲುವಿಗೆ ಮಾಜಿ ಕ್ರಿಕೆಟಿಗರು ಕೂಡ ಸಂತಸ ವ್ಯಕ್ತಪಡಿಸಿದ್ದಾರೆ. ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಕೂಡ ಪಾಕಿಸ್ತಾನದ ವಿರುದ್ಧ ಭಾರತದ ವಿಜಯವನ್ನು ವಿಭಿನ್ನವಾಗಿ ಸಂಭ್ರಮಿಸಿದ್ದಾರೆ. ಟೀಂ ಇಂಡಿಯಾ ಗೆಲುವಿನ ನಂತರ ಜಯ್ ಶಾ ಅವರು ನಸ್ಸೌ ಕೌಂಟಿ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಸಂಭ್ರಮಾಚರಣೆ ಮಾಡಿದರು. ಇದರ ವಿಡಿಯೋ ಈಗ ಸಾಮಾಜಿಕ ಜಾಲತಾಣಗಳಲ್ಲಿ ಸಕತ್ ವೈರಲ್ ಆಗುತ್ತಿದೆ. ಜೂನ್ 9, ಭಾನುವಾರದಂದು ನಡೆದ ರೋಚಕ ಪಂದ್ಯದಲ್ಲಿ ಟೀಂ ಇಂಡಿಯಾ ಪಾಕಿಸ್ತಾನವನ್ನು 6 ರನ್‌ಗಳಿಂದ ಸೋಲಿಸಿತು. ಈ ಗೆಲುವಿನ ನಂತರ ಕ್ರೀಡಾಂಗಣದಲ್ಲಿ ಕುಳಿತಿದ್ದ ಸಾವಿರಾರು ಪ್ರೇಕ್ಷಕರ ಖುಷಿಗೆ ಪಾರವೇ ಇರಲಿಲ್ಲ. ಸ್ಟೇಡಿಯಂನಲ್ಲಿದ್ದ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಕೂಡ ಟೀಂ ಇಂಡಿಯಾ ಗೆಲುವಿಗೆ ಎದ್ದು ನಿಂತು ಚಪ್ಪಾಳೆ ತಟ್ಟಿದರು. ಇದರ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಇದೀಗ ವೈರಲ್ ಆಗುತ್ತಿದೆ. ಇಷ್ಟೇ ಅಲ್ಲ, ಜಯ್ ಶಾ ಕೂಡ ಟೀಂ ಇಂಡಿಯಾ ಗೆಲುವಿಗೆ ಪೋಸ್ಟ್ ಶೇರ್ ಮಾಡುವ ಮೂಲಕ ಅಭಿನಂದಿಸಿದ್ದಾರೆ.

ಪಾಕ್‌ತಂಡದ ಸೋಲಿಗೆ ಈತನೇ ಕಾರಣ

ಮಾಜಿ ಕ್ರಿಕೆಟಿಗರ ಕಿಡಿ

ಪಾಕ್ ತಂಡದ ಸೋಲಿಗೆ ತಂಡದ ಬ್ಯಾಟಿಂಗ್ ವಿಭಾಗ ಪ್ರಮುಖ ಕಾರಣ ಎಂಬುದು ಎಲ್ಲಾರ ಅಭಿಪ್ರಾಯ. ಅದಕ್ಕೆ ಪೂರಕವೆಂಬಂತೆ ಇಡೀ ಪಾಕ್ ಬ್ಯಾಟರ್ಸ್ ಸುಮಾರು 10 ಓವರ್‌ಗಳಲ್ಲಿ ಅಂದರೆ 59 ಎಸೆತಗಳಲ್ಲಿ ಯಾವುದೇ ರನ್ ಗಳಿಸಲಿಲ್ಲ. ಇದು ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು.

ಹೀಗೆ ಪಾಕಿಸ್ತಾನ ತಂಡದ ಸೋಲಿಗೆ ನಾನಾ ಕಾರಣಗಳನ್ನು ನೀಡಲಾಗುತ್ತಿದೆ. ಇದೀಗ ತಂಡದ ಸೋಲಿಗೆ ಕಾರಣ ಏನು ಎಂಬುದುಕ್ಕೆ ಪಾಕ್ ಮಾಜಿ ನಾಯಕರು ತಮ್ಮದೇಯಾದ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಅದರಲ್ಲಿ ಪ್ರಮುಖವಾಗಿ ಮಾಜಿ ನಾಯಕ ಸಲೀಂ ಮಲಿಕ್ ನೀಡಿರುವ ಹೇಳಿಕೆ ಎಲ್ಲಾರಲ್ಲೂ ಅಚ್ಚರಿ ಮೂಡಿಸಿದೆ.

ತಂಡದ ಸೋಲಿಗೆ ಬೇಸರ ವ್ಯಕ್ತಪಡಿಸಿರುವ ಸಲೀಂ ಮಲಿಕ್, ಭಾರತ ವಿರುದ್ಧದ ಈ ಪಂದ್ಯದಲ್ಲಿ ತಂಡದ ಆಲ್‌ರೌಂಡರ್ ಇಮಾದ್ ವಾಸಿಂ (23 ಎಸೆತಗಳಲ್ಲಿ 15 ರನ್) ಉದ್ದೇಶಪೂರ್ವಕವಾಗಿ ಚೆಂಡುಗಳನ್ನು ವ್ಯರ್ಥ ಮಾಡಿದ್ದಾರೆ. ರನ್‌ಗಳಿಸುವ ಬದಲು ಅವರು ಚೆಂಡುಗಳನ್ನು ವ್ಯರ್ಥ ಮಾಡುತ್ತಾ ಸುಲಭವಾಗಿ ಗುರಿ ಬೆನ್ನಟ್ಟುವುದನ್ನು ಕಷ್ಟಕರವಾಗಿಸಿದರು ಎಂದು ಆರೋಪಿಸಿದ್ದಾರೆ.



ಮತ್ತೊಬ್ಬ ಮಾಜಿ ನಾಯಕ ಶಾಹಿದ್ ಅಫ್ರಿದಿ ಪಾಕಿಸ್ತಾನ ತಂಡದಲ್ಲಿ ಎಲ್ಲಾವೂ ಸರಿಯಾಗಿ ನಡೆಯುತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೆಲವು ಆಟಗಾರರು ನಾಯಕ ಬಾಬರ್ ಆಝಂ ವಿರುದ್ಧ ದೂರುಗಳನ್ನು ಹೊಂದಿದ್ದಾರೆ. ಒಬ್ಬ ನಾಯಕ ಎಲ್ಲಾರನ್ನೂ ಜೊತೆಗೆ ಕರೆದುಕೊಂಡು ಹೋಗಬೇಕು. ಒಬ್ಬ ನಾಯಕ ತಂಡವನ್ನು ಹಾಳುಮಾಡಬಹುದು ಅಥವಾ ತಂಡವನ್ನು ಉತ್ತಮಗೊಳಿಸಬಹುದು.

ವಿಶ್ವಕಪ್ ಮುಗಿಯಲಿ, ನಂತರ ನಾನು ಮುಕ್ತವಾಗಿ ಮಾತನಾಡುತ್ತೇನೆ ಎಂದಿದ್ದಾರೆ. ಶೋಯೇಬ್ ಅಖ್ತರ್ ಕೂಡ ಈ ಬಗ್ಗೆ ಬೇಸರ ವ್ಯಕ್ತಪಡಿಸಿದ್ದು, ನಿಮಗೆ ನಿರಾಶೆ ಮತ್ತು ನೋವಾದಾಗ ಪೋಸ್ಟ್ ಮಾಡುವುದು ಸಹಜ. ಇಡೀ ದೇಶಕ್ಕೆ ಈ ಸೋಲಿನಿಂದ ನಿರಾಶೆಯಾಗಿದೆ. ನೈತಿಕತೆ ಕಡಿಮೆಯಾಗಿದೆ. ಹೇಗಾದರೂ ಮಾಡಿ ಗೆಲ್ಲುವ ಇಂಗಿತವನ್ನು ತೋರಿಸಬೇಕು. ಪಾಕಿಸ್ತಾನಕ್ಕೆ ಸೂಪರ್ ಎಂಟಕ್ಕೆ ಬರದ ಅರ್ಹತೆ ಇದೆಯೇ ಆ ದೇವರೇ ಬಲ್ಲ. ಎಂದಿದ್ದಾರೆ.

ಇಮ್ರಾನ್ ಖಾನ್‌ನ ಬಿಡುಗಡೆ ಮಾಡಿ

ಭಾರತ ಮತ್ತು ಪಾಕಿಸ್ತಾನ್ ನಡುವಣ ಪಂದ್ಯದ ವೇಳೆ ''ಇಮ್ರಾನ್ ಖಾನ್ ಅವರನ್ನು ಬಿಡುಗಡೆ ಮಾಡಿ'' ಎಂಬ ಸಂದೇಶದ ಬ್ಯಾನರ್ ಹೊಂದಿರುವ ವಿಮಾನವು ನ್ಯೂಯಾರ್ಕ್‌ನ ನಸ್ಸೌ ಕೌಂಟಿ ಕ್ರಿಕೆಟ್ ಸ್ಟೇಡಿಯಂ ಮೇಲೆ ಹಾರಾಡಿದೆ. ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಇದೀಗ ಜೈಲಿನಲ್ಲಿದ್ದು, ಹೀಗಾಗಿ ಅವರನ್ನು ಬಿಡುಗಡೆ ಮಾಡುವಂತೆ ಬ್ಯಾನರ್ ಪ್ರದರ್ಶಿಸುವ ಮೂಲಕ ಒತ್ತಾಯಿಸಿದರು.

ಪಂದ್ಯದ ನಡುವೆ ವಿಮಾನವು ಇಮ್ರಾನ್ ಖಾನ್ ಅವರನ್ನು ಬಿಡುಗಡೆ ಮಾಡಬೇಕೆಂಬ ಬ್ಯಾನರ್ ಪ್ರದರ್ಶಿಸುತ್ತಾ ಮೈದಾನದ ಸುತ್ತಲೂ ಹಾರಾಡುತ್ತಿರುವುದು ಕಂಡು ಬಂತು. ಇದೀಗ ಈ ವಿಡಿಯೋ ವೈರಲ್ ಆಗಿದ್ದು, ಈ ಪ್ರತಿಭಟನೆಯ ರೂಪಕದ ಬ್ಯಾನರ್ ಪ್ರದರ್ಶನದ ಹಿಂದೆ ಯಾರಿದ್ದಾರೆ ಎಂಬುದು ತಿಳಿದು ಬಂದಿಲ್ಲ.

ಪಾಕಿಸ್ತಾನ್ ತಂಡದ ಮಾಜಿ ನಾಯಕ ಇಮ್ರಾನ್ ಖಾನ್ ಅವರು ತಾವು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ವಿದೇಶಿಗಣ್ಯರಿಂದ ಅಕ್ರಮವಾಗಿ ಉಡುಗೊರೆ ಪಡೆದಿದ್ದಾರೆ ಎಂದು ಆರೋಪ ಕೇಳಿಬಂದಿತ್ತು. ಭ್ರಷ್ಟಾಚಾರ ಆರೋಪದಲ್ಲಿ ಬಂಧಿತರಾಗಿದ್ದ ಅವರನ್ನು ತಪ್ಪಿತಸ್ಥ ಎಂದು ಇಸ್ಲಾಮಾಬಾದ್ ಕೋರ್ಟ್ ತೀರ್ಪು ನೀಡಿದೆ.

ಟಿ20 ವಿಶ್ವಕಪ್‌ನಲ್ಲಿ ಜಡೇಜಾ ಫೇಲ್..!

15 ವರ್ಷಗಳಿಂದ ಇದೇ ಕಥೆ

ಜಡೇಜಾ ಅವರ ಬ್ಯಾಟಿಂಗ್ ವೈಫಲ್ಯದ ಕಥೆ ಹೊಸದಲ್ಲ. ಬದಲಿಗೆ ಅವರು ಯಾವಾಗಲೂ ಈ ವಿಚಾರದಲ್ಲಿ ವಿಫಲರಾಗಿದ್ದಾರೆ. ಜಡೇಜಾ 2009 ರಿಂದ ಟಿ20 ವಿಶ್ವಕಪ್‌ನಲ್ಲಿ ಟೀಂ ಇಂಡಿಯಾದ ಭಾಗವಾಗಿದ್ದಾರೆ ಮತ್ತು 2022 ರ ವಿಶ್ವಕಪ್ ಹೊರತುಪಡಿಸಿ ಪ್ರತಿ ಬಾರಿ ಆಡಿದ್ದಾರೆ. ಈ ಎಲ್ಲಾ ಆವೃತ್ತಿಗಳಲ್ಲಿ ಜಡೇಜಾ ಬ್ಯಾಟಿಂಗ್‌ನಲ್ಲಿ ವಿಫಲರಾಗಿದ್ದಾರೆ. ತಂಡದ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರ ಸತತ ವೈಫಲ್ಯ ತಂಡವನ್ನು ಚಿಂತೆಗೀಡುಮಾಡಿದೆ ಇದು ಇಂದು ನಿನ್ನೆಯ ಕಥೆಯಲ್ಲ ಬರೋಬ್ಬರಿ ಕಳೆದ 15 ವರ್ಷಗಳಿಂದಲ್ಲೂ ಟಿ20 ವಿಶ್ವಕಪ್‌ನಲ್ಲಿ ರವೀಂದ್ರ ಜಡೇಜಾ ಬ್ಯಾಟಿಂಗ್‌ನಲ್ಲಿ ತಂಡಕ್ಕೆ ನೀಡಿದ ಕೊಡುಗೆ ಅಷ್ಟಕಷ್ಟೆ. ವಾಸ್ತವವಾಗಿ ನ್ಯೂಯಾರ್ಕ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಪಿಚ್ ಬ್ಯಾಟಿಂಗ್‌ಗೆ ಅನುಕೂಲವಾಗುವುದಿಲ್ಲ ಎಂಬ ಆತಂಕ ಮೊದಲಿನಿಂದಲೂ ಇತ್ತು. ಅದಕ್ಕಿಂತ ಹೆಚ್ಚಾಗಿ, ಮಳೆಯಿಂದಾಗಿ ಬದಲಾದ ಪರಿಸ್ಥಿತಿಯಲ್ಲಿ ಮೊದಲು ಬ್ಯಾಟಿಂಗ್ ಮಾಡುವುದು ಇನ್ನಷ್ಟು ಕಷ್ಟಕರವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಟೀಂ ಇಂಡಿಯಾಗೆ ತನ್ನ ಪ್ರತಿಯೊಬ್ಬ ಬ್ಯಾಟ್ಸ್‌ಮನ್‌ಗಳ ಕೊಡುಗೆಯ ಅಗತ್ಯವಿತ್ತು.

ಇದರಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್ ಮತ್ತು ಶಿವಂ ದುಬೆ ಅವರಂತಹ ಬ್ಯಾಟ್ಸ್‌ಮನ್‌ಗಳು ಬೇಗನೆ ಔಟಾದರು. ಅಂತಹ ಪರಿಸ್ಥಿತಿಯಲ್ಲಿ ತಂಡದ ಸ್ಟಾರ್ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರ ಕೊಡುಗೆ ಅತ್ಯಗತ್ಯವಾಗಿತ್ತು. ಆದರೆ ಜಡೇಜಾಗೆ ಖಾತೆ ತೆರೆಯಲು ಸಾಧ್ಯವಾಗಲಿಲ್ಲ. ನಿನ್ನೆಯ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಂ ಇಂಡಿಯಾ 15 ಓವರ್‌ಗಳಲ್ಲಿ ಕೇವಲ 96 ರನ್‌ಗಳಿಗೆ ಆರ್ ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿಕೊಂಡಿತ್ತು. ಈ ವೇಳೆ ಜಡೇಜಾ ಕ್ರೀಸ್‌ಗೆ ಕಾಲಿಟ್ಟಿದ್ದರು. ಭಾರತದ ಇನ್ನಿಂಗ್ಸ್‌ನಲ್ಲಿ ಇನ್ನೂ 35 ಎಸೆತಗಳು ಬಾಕಿ ಇದ್ದಿದ್ದರಿಂದ ಜಡೇಜಾಗೆ ಉತ್ತಮ ಇನ್ನಿಂಗ್ಸ್ ಕಟ್ಟುವ ಅವಕಾಶವಿತ್ತು. ಆದರೆ ಜಡೇಜಾ ಮೊದಲ ಎಸೆತದಲ್ಲೇ ಖಾತೆ ತೆರೆಯದೆ ಔಟಾದರು. ಈ ಮೂಲಕ ಮತ್ತೊಮ್ಮೆ ಜಡೇಜಾ ಟಿ20 ವಿಶ್ವಕಪ್‌ನಲ್ಲಿ ಅಗತ್ಯದ ಸಮಯದಲ್ಲಿ ತಮ್ಮ ಬ್ಯಾಟಿಂಗ್‌ನಲ್ಲಿ ನಿರಾಸೆ ಮೂಡಿಸಿದರು.

ಪಾಕ್ ವಿರುದ್ಧ ಭಾರತಕ್ಕೆ ಜಯ 7.6 ಕೋಟಿ ರೂ. ಗೆದ್ದ ಡ್ರೇಕ್

ಭಾರತ ಮತ್ತು ಪಾಕಿಸ್ತಾನ್ ನಡುವಣ ಹೈವೋಲ್ಟೇಜ್ ಪಂದ್ಯದಲ್ಲಿ ಬಾಜಿ ಕಟ್ಟಿದ್ದ ಕೆನಡಾದ ಖ್ಯಾತ ರಾಪರ್ ಆಬ್ರೆ ಡ್ರೇಕ್ ಗ್ರಹಾಂ ಬರೋಬ್ಬರಿ 7.6 ಕೋಟಿ ರೂ. ಜೇಬಿಗಿಳಿಸಿಕೊಂಡಿದ್ದಾರೆ. ಇಂಡೊಪಾಕ್ ನಡುವಣ ಪಂದ್ಯದಲ್ಲಿ ಟೀಮ್ ಇಂಡಿಯಾ ಗೆಲ್ಲಲಿದೆ ಎಂದು ಡ್ರೇಕ್ 650,000 ಯುಎಸ್ ಡಾಲರ್ ಬೆಟ್ ಕಟ್ಟಿದ್ದರು. ಅಂದರೆ ಭಾರತೀಯ ರೂ. ಮೌಲ್ಯ ಸುಮಾರು 5.42 ಕೋಟಿ ರೂಪಾಯಿ.

ಇತ್ತ ಪಾಕ್ ತಂಡವನ್ನು ಭಾರತ ಬಗ್ಗು ಬಡಿಯುತ್ತಿದ್ದಂತೆ ಅತ್ತ ಡ್ರೇಕ್ ಬಾಜಿಯಲ್ಲಿ ಗೆದ್ದಿದ್ದಾರೆ. ಅದರಂತೆ ಒಟ್ಟು ಮೊತ್ತವಾಗಿ 910,000 ಯುಎಸ್ ಡಾಲರ್ ಗೆದ್ದಿದ್ದಾರೆ. ಅಂದರೆ ಡ್ರೇಕ್ ಭಾರತೀಯ ರೂಪಾಯಿ ಮೌಲ್ಯ ಬರೋಬ್ಬರಿ 7.6 ಕೋಟಿ ರೂ. ಪಡೆದಿದ್ದಾರೆ.

ಅಂದಹಾಗೆ ಕೆನಡಾ ಗಾಯಕ ಹೀಗೆ ಬೆಟ್ ಕಟ್ಟುತ್ತಿರುವುದು ಇದೇ ಮೊದಲೇನಲ್ಲ. ಈ ಹಿಂದಿನಿಂದಲೂ ಬಾಜಿಯಲ್ಲಿ ತೊಡಗಿಸಿಕೊಂಡಿರುವ ಡ್ರೇಕ್ ಗ್ರಹಾಂ ಐಪಿಎಲ್‌ನಿಂದ 2.5 ಕೋಟಿ ರೂ. ಸಂಪಾದಿಸಿದ್ದರು.

ಐಪಿಎಲ್ 2024 ರ ಫೈನಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು ಗೆಲ್ಲಲಿದೆ ಎಂದು ಡ್ರೇಕ್ 2.5 ಕೋಟಿ ರೂ. ಬೆಟ್ ಕಟ್ಟಿದ್ದರು. ಅದರಂತೆ ಫೈನಲ್ ಪಂದ್ಯದಲ್ಲಿ ಕೆಕೆಆರ್ ತಂಡ ಚಾಂಪಿಯನ್ ಪಟ್ಟ ಅಲಂಕರಿಸುವುದರೊಂದಿಗೆ ಸುಮಾರು 4.5 ಕೋಟಿ ರೂ. ಬೆಟ್ ಮೊತ್ತ ಪಡೆದಿದ್ದರು.

'ಕೋಟಿ'ಯಲ್ಲಿ ಮಿಂಚಲು ಸಜ್ಜಾದ ನವಪ್ರತಿಭೆಗಳು

ಡಾಲಿ ನಟನೆಯ ಸಿದ್ಧವಿರುವ 'ಕೋಟಿ' ಸಿನಿಮಾ ಈಗಾಗಲೇ ಟ್ರೈಲರ್ ಮತ್ತು ಹಾಡುಗಳಿಂದ ಸದ್ದು ಮಾಡುತ್ತಿದೆ. ಡಾಲಿ ಧನಂಜಯ್ 'ಕೋಟಿ' ಎಂಬ ಒಬ್ಬ ಸಾಮಾನ್ಯ ಡ್ರೈವರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಕೋಟಿಗೆ ಯಾರಿಗೂ ಮೋಸ ಮಾಡದೆ, ನೋವು ನೀಡದೆ ಒಂದು ಕೋಟಿ ರೂಪಾಯಿ ದುಡಿದು ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳುವ ಬಯಕೆ.

'ಕೋಟಿ' ಚಿತ್ರದ ಇನ್ನೊಂದು ವಿಶೇಷತೆ ಇಬ್ಬರು ಹೊಸ ಪ್ರತಿಭೆಗಳು. 'ಕೋಟಿ'ಯಲ್ಲಿ ಧನಂಜಯ್‌ಗೆ ತಾಯಿಯಾಗಿ ತಾರಾ ಅಭಿನಯಿಸಿದ್ದರೆ, ತಮ್ಮ ತಂಗಿಯಾಗಿ ಪೃಥ್ವಿ ಶಾಮನೂರು ಮತ್ತು ತನುಜಾ ವೆಂಕಟೇಶ್ ಅಭಿನಯಿಸಿದ್ದಾರೆ. ಇತ್ತಿಚೆಗೆ ನಡೆದ ಚಿತ್ರದ ಟ್ರೈಲರ್ ರಿಲೀಸ್ ಸಮಾರಂಭದಲ್ಲಿ ಡಾಲಿ ಧನಂಜಯ್ ಮತ್ತು ತಾರಾ ಅವರು ಈ ಹೊಸ ಪ್ರತಿಭೆಗಳ ಅಭಿನಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಉದಯೋನ್ಮುಖ ನಟ 'ಪೃಥ್ವಿ ಶಾಮನೂರು' ಈಗಾಗಲೇ ಹರಿಪ್ರಸಾದ್ ಜಯಣ್ಣ ನಿರ್ದೇಶನದ 'ಪದವಿ ಪೂರ್ವ'ದ ಮುಖಾಂತರ ತಮ್ಮ ಸಿನಿಮಾ ಪಯಣವನ್ನು ಆರಂಭಿಸಿದ್ದಾರೆ. ಕೋಟಿ ಸಿನಿಮಾದಲ್ಲಿ ಇವರ ಪಾತ್ರ ನಚ್ಚಿ, ಕೋಟಿಯ ಪ್ರೀತಿಯ ತಮ್ಮ. ಯಾರಿಗೂ ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಇವನು ಅಕ್ಕ ಅಣ್ಣಂದಿರ ಕಾಡಿಸುತ್ತ ನಗಿಸುತ್ತ ಮನೆಗೊಂದು ಕಳೆ ತರುವ ತುಂಟ. ಹಾಗೆಯೆ ಕೋಟಿಯ ತಂಗಿ 'ಮಹತಿ'ಯ ಪಾತ್ರದಲ್ಲಿ ರಂಗಭೂಮಿ ಹಿನ್ನೆಲೆಯ ತನುಜಾ ವೆಂಕಟೇಶ್ ಕಾಣಿಸಿಕೊಂಡಿದ್ದಾರೆ. ಇವರಿಗೆ ಇದು ಚೊಚ್ಚಲ ಸಿನಿಮಾ.

ಕೋಟಿ ಚಿತ್ರದ ತಮ್ಮ ಪಾತ್ರದ ಬಗ್ಗೆ ಮಾತನಾಡಿದ ಪೃಥ್ವಿ ಶಾಮನೂರು ನಚ್ಚಿ ಒಂದು ಸಣ್ಣ ಪಾತ್ರವಾದರೂ ತುಂಬಾ ಇಂಪ್ಯಾಕ್ಟ್ ಇರುವ ಪಾತ್ರ. ಇಷ್ಟು ದೊಡ್ಡ ಸಿನಿಮಾದಲ್ಲಿ ಅವಕಾಶ ಸಿಕ್ಕಿದ್ದಕ್ಕೆ ತುಂಬಾ ಖುಷಿ ಇದೆ ಎಂದರು. ಕೋಟಿಯ ತಂಗಿಯ ಪಾತ್ರ ಮಾಡಿರುವ ತನುಜಾ ವೆಂಕಟೇಶ್ ನಾನು ಕೋಟಿಯ ತಂಗಿ 'ಮಹತಿ'ಯಾಗಿ ಅಭಿನಯಿಸಿದೀನಿ. ಒಂದು ಇಂಪಾರ್ಟೆಂಟ್ ಪಾತ್ರ. ಧನಂಜಯ್ ಅಣ್ಣ, ತಾರಮ್ಮ ಮತ್ತು ಪೃಥ್ವಿ ಅವರ ಜತೆ ಚಿತ್ರೀಕರಣದಲ್ಲಿ ಭಾಗವಹಿಸಿದ್ದು ಒಂದು ಕುಟುಂಬದ ಜತೆ ಇದ್ದಂತೆ ಅನಿಸಿತು'' ಎಂದು ಸಂತಸ ಹಂಚಿಕೊಂಡರು.

ಕೋಟಿ ಚಿತ್ರದ ನಿರ್ದೇಶಕ ಪರಮ್, ಈಗಾಗಲೇ ಹೀರೋ ಆಗಿ 'ಪದವಿ ಪೂರ್ವ' ಚಿತ್ರದಲ್ಲಿ ನಟಿಸಿರುವ ಪೃಥ್ವಿ ಶಾಮನೂರು 'ನಚ್ಚಿ' ಪಾತ್ರವನ್ನು ಇಷ್ಟಪಟ್ಟು ಒಪ್ಪಿ ನಟಿಸಿದ್ದಾರೆ.

ಅವರ ಅಭಿನಯದ ಎರಡು ದೃಶ್ಯಗಳನಂತೂ ನೀವು ತುಂಬಾ ಇಷ್ಟಪಡುತ್ತೀರಿ. ಮಹತಿಯ ಪಾತ್ರ ಮಾಡಿರುವ ತನುಜಾ ಅವರ ಮೊದಲ ಸಿನಿಮಾ ಇದು.

ಅವರ ಅಭಿನಯದಲ್ಲಿ ತುಂಬಾ ಲೈಫ್ ಇದೆ. ಪ್ರತಿಭಾವಂತ ನಟಿ ಎಂದರು.

ಬಾಲಿವುಡ್ ನಟಿ ದಾಸ್ ಆತ್ಮಹತ್ಯೆ

ನೂರ್ ಮಾಳವಿಕಾ ದಾಸ್ ಅವರು ಮುಂಬೈನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಲೋಖಂಡ್‌ವಾಲಾದಲ್ಲಿರುವ ತಮ್ಮ ಫ್ಲ್ಯಾಟ್‌ನಲ್ಲಿ 32 ವರ್ಷದ ಬಾಲಿವುಡ್ ನಟಿಯು ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜೂನ್ 6ರಂದೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಾಗಿ ಮೂಲಗಳು ತಿಳಿಸಿವೆ. ಜೂನ್ 6ರಂದೇ ನಟಿ ಆತ್ಮಹತ್